ಸಂಪುಟ 01 । ಸಂಚಿಕೆ 85 । ಶನಿವಾರ 07 ಫೆಬ್ರವರಿ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಆವರ್ತಕ ಕೋಷ್ಟಕ ದಿನ

ಫೆಬ್ರವರಿ 7 ರಂದು, ರಾಷ್ಟ್ರೀಯ ಆವರ್ತಕ ಕೋಷ್ಟಕ ದಿನವು ಅಂಶಗಳ ಮೊದಲ ಕೋಷ್ಟಕದ ಪ್ರಕಟಣೆಯನ್ನು ಗುರುತಿಸುತ್ತದೆ. ವರ್ಷಗಳಲ್ಲಿ ಆವರ್ತಕ ಕೋಷ್ಟಕವು ಹೇಗೆ ಬದಲಾಗಿದೆ ಎಂಬುದನ್ನು ನೋಡೋಣ. ಆವರ್ತಕ ಕೋಷ್ಟಕವು ದೀರ್ಘ ಇತಿಹಾಸವನ್ನು ಹೊಂದಿದೆ. ಪ್ರಾಚೀನ ಮನುಷ್ಯನಿಗೆ ಕೆಲವೇ ಅಂಶಗಳ ಬಗ್ಗೆ ತಿಳಿದಿತ್ತು. ಕ್ರಿ.ಶ. 1 ನೇ ಶತಮಾನದ ಹೊತ್ತಿಗೆ, ಮಾನವಕುಲವು ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ, ಸೀಸ, ತವರ, ಪಾದರಸ, ಗಂಧಕ ಮತ್ತು ಇಂಗಾಲದ ಅಂಶಗಳ ಬಗ್ಗೆ ತಿಳಿದಿತ್ತು. ಕಾಲಾನಂತರದಲ್ಲಿ, ಆರ್ಸೆನಿಕ್, ಆಂಟಿಮನಿ, ರಂಜಕ ಮತ್ತು ಸತುವು ನಮ್ಮ ಸಂಶೋಧನೆಗಳಿಗೆ ಸೇರಿಸಲ್ಪಟ್ಟವು. 1809 ರ ಹೊತ್ತಿಗೆ, 47 ಕಂಡುಹಿಡಿಯಲಾದ ಅಂಶಗಳು ಇದ್ದವು.

## ಸುಭಾಷಿತ

ಜಗತ್ತಿನ ಯಾವುದೇ ಶಕ್ತಿಗಿಂತ ಪೆನ್ನು ಮತ್ತು ಕಾಗದದ ಶಕ್ತಿ ದೊಡ್ಡದು. ಒಂದು ರೊಟ್ಟಿ ಕಡಿಮೆ ತಿನ್ನಿ ಆದರೆ ನಿಮ್ಮ ಮಕ್ಕಳಿಗೆ ಖಂಡಿತವಾಗಿಯೂ ಶಿಕ್ಷಣ ನೀಡಿ.

ಡಾ. ಭೀಮರಾವ್ ಅಂಬೇಡ್ಕರ್

# ತಣ್ಣಗಾದ ಅಧಿಕಾರ ಹಂಚಿಕೆ ಗೊಂದಲ
# ಬಜೆಟ್ ತಯಾರಿಯಲ್ಲಿ ಬ್ಯುಸಿಯಾದ ಸಿಎಂ

ಬೆಂಗಳೂರು: ಅಧಿಕಾರ ಹಂಚಿಕೆಯ ಗೊಂದಲಗಳು ತಣ್ಣ ಗಾಗಿದ್ದು, ಸದ್ಯಕ್ಕೆ ಹೈಕಮಾಂಡ್ ಯಾವುದೇ ನಿರ್ಧಾರ ತೆಗೆದುಕೊಳ್ಳುವು ದಿಲ್ಲ ಎಂಬುದು ಸ್ಪಷ್ಟವಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಿರುಮಳವಾಗಿ ಬಜೆಟ್ ತಯಾರಿಕೆಯಲ್ಲಿ ತೊಡಗಿದ್ದಾರೆ. ನಿನ್ನೆ 10 ಇಲಾಖೆಗಳ ಸಚಿವರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಬಜೆಟ್ ಪೂರ್ವ ಸಮಾಲೋಚನೆ ನಡೆಸಿದರು.

ಇಂದು ಪರಿಶಿಷ್ಟ ವರ್ಗಗಳ ಕಲ್ಯಾಣ, ಯುವ ಸಬಲೀಕರಣ-ಕ್ರೀಡೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ಇ-ಆಡಳಿತ, ವೈದ್ಯಕೀಯ ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯ, ಮೂಲಸೌಕರ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಮುಖ್ಯಸ್ಥರ ಜೊತೆ ಸಮಾಲೋಚನೆ ನಡೆಸಿದ್ದಾರೆ. ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ಅವರು ಸಭೆಯಲ್ಲಿ ಭಾಗವಹಿಸಿದ್ದರು.



ಉಳಿದಂತೆ ಎಲ್ಲಾ ಇಲಾಖೆಗಳ ಜವಾಬ್ದಾರಿಯೂ ಮುಖ್ಯಮಂತ್ರಿಯವರ ಬಳಿಯಲ್ಲೇ ಇವೆ.

ಹಾಗಾಗಿ ಸಚಿವರ ಬದಲಾಗಿ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳ ಜೊತೆ ಚರ್ಚೆ ನಡೆಸಲಾಗಿದೆ. ವಿಧಾನಮಂಡಲ ಅಧಿವೇಶನದ ಬಳಿಕ ನಾಯಕತ್ವ ಬದಲಾವಣೆಗೆ ಹೈಕಮಾಂಡ್ ನಾಯಕರು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಇಬ್ಬರನ್ನೂ ದೆಹಲಿಗೆ ಕರೆಸುತ್ತಾರೆ ಎಂದು ಹೇಳಲಾಗಿತ್ತು. ಆದರೆ ಅಂತಹ ಯಾವ ಲಕ್ಷಣಗಳೂ ಸದ್ಯಕ್ಕೆ ಕಂಡು ಬರುತ್ತಿಲ್ಲ. ಡಿ.ಕೆ.ಶಿವಕುಮಾರ್ ಬೆಂಬಲಿ ಗರು ಕೆಲವೆಡೆ ಬಹಿರಂಗ ಹೇಳಿಕೆಗಳನ್ನು ನೀಡಿ ನಾಯಕತ್ವ ಬದಲಾವಣೆಯ ಗೊಂದಲವನ್ನು ಹೈಕಮಾಂಡ್ ಮಧ್ಯ ಪ್ರವೇಶಿಸಿ ಕೂಡಲೇ ಬಗೆಹರಿಸಬೇಕು ಎಂದು ಒತ್ತಾಯಿಸಿದ್ದಾರೆ. ಸಿದ್ದರಾಮಯ್ಯ ಬಣದ ಸಚಿವ ಸತೀಶ್ ಜಾರಕಿಹೊಳಿ ಕೂಡ ಇದಕ್ಕೆ ಧ್ವನಿಗೂಡಿಸಿದ್ದಾರೆ. ನಾಯಕತ್ವದ ಗೊಂದಲವನ್ನು ಹೈಕಮಾಂಡ್ ಸೃಷ್ಟಿಸಿದ್ದಲ್ಲ, ಸ್ಥಳೀಯ ನಾಯಕರು ಸೃಷ್ಟಿ ಮಾಡಿಕೊಂಡಿದ್ದಾರೆ.

ಅವರಾಗಿಯೇ ಗೊಂದಲ ಬಗೆ ಹರಿಸಿಕೊಳ್ಳಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದರು. ಡಿ.ಕೆ.ಶಿವಕುಮಾರ್ ಮೈಸೂರಿನಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕರ ರಾಹುಲ್ ಗಾಂಧಿಯವರನ್ನು ಭೇಟಿ ಮಾಡಿ, ತಮ ನೆರವಿಗೆ ಬರುವಂತೆ ಮನವಿ ಮಾಡಿದ್ದರು. ಅನಂತರ ಡಿ.ಕೆ.ಶಿವಕುಮಾರ್ ದೆಹಲಿಗೆ ಹೋದಾಗ ಪ್ರತ್ಯೇಕ ಭೇಟಿಗೆ ಸಮಯವನ್ನೇ ನೀಡದೆ ಬರಿಗೈನಲ್ಲಿ ವಾಪಾಸ್ ಕಳುಹಿಸಿದ್ದರು. ಡಿ.ಕೆ.ಶಿವಕುಮಾರ್ ದೆಹಲಿಯಿಂದ ಮರಳಿದ ಬಳಿಕ ರಾಜ್ಯ ರಾಜಕೀಯದಲ್ಲಿ ಬೇರೆಯದೇ ಚಿತ್ರಣ ಕಂಡು ಬಂತು. ಹೈಕಮಾಂಡ್ ಗೊಂದಲವನ್ನು ಬಗೆ ಹರಿಸದೆ ಇಬ್ಬರ ನಡುವೆ ಪೈಪೋಟಿ ಬೆಳೆಯಲು ಬಿಟ್ಟು ತನ್ನ ಬೇಳೆ ಬೇಯಿಸಿಕೊಳ್ಳುತ್ತಿದೆ ಎಂಬ ಆಕ್ರೋಶಗಳು ಡಿ.ಕೆ.ಶಿವಕುಮಾರ್

2ನೇ ಪುಟಕ್ಕೆ

## ಗೊರ್ಕಲ್ ಗ್ರಾಮದಲ್ಲಿ ನೀರಿಗಾಗಿ ಹೋರಾಟ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ರಾಯಚೂರು ಜಿಲ್ಲೆ ಮಾನ್ವಿ ತಾಲೂಕಿನ ಗೊರ್ಕಲ್ ಗ್ರಾಮದಲ್ಲಿ ಪಂಚಾಯತ್ ಎದುರು ಕೊಡಗಳನ್ನು ಹಿಟ್ಟು ವೃದ್ಧ ಮಹಿಳೆಯರು ಹಿರಿಯರು ಹಾಗೂ ಸಣ್ಣ ಸಣ್ಣ ಮಕ್ಕಳು ನೀರಿಗಾಗಿ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಫೆಬ್ರವರಿ 10 ರಂದು ದ್ಯಾವಮ್ಮ ದೇವಿ ಜಾತ್ರಾ ಮಹೋತ್ಸವ ನಡೆಯಲಿದೆ.



ಆದ್ದರಿಂದ ಗ್ರಾಮದಲ್ಲಿ ಸಮಯಕ್ಕೆ ಸರಿಯಾಗಿ ನೀರು ಬರುತ್ತಿಲ್ಲ ಎಂದು ಊರಿನ ಗ್ರಾಮಸ್ಥರು ಬಿಂದಿಗೆ ಹಿಡಿದು ಗ್ರಾಮ ಪಂಚಾಯತಿಗೆ ಬೀಗ ಹಾಕಿ ಮಹಿಳೆಯರು ಹಾಗೂ ಬಸವರಾಜ್ ನಾಯಕ ಗೊರ್ಕಲ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಅತೀ ಶೀಘ್ರದಲ್ಲಿ ನೀರು ಬಿಡಬೇಕು. ಒಂದು ವೇಳೆ ನೀರು ಬಿಡದಿದ್ದಲ್ಲಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಅಕ್ತಾರ್ ಪಾಷಾ ವಿರುದ್ಧ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ಗ್ರಾಮಸ್ಥರು ಎಚ್ಚರಿಸಿದ್ದಾರೆ.

# ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕೆ ಮುಂದಾಗಿ: ಸರಸ್ವತಿ




ನೈಜ್ಯ ದೆಸೆ ನ್ಯೂಸ್

ತಂಬಾಕು ಸೇವನೆಯಿಂದ ಮಾರಣಾಂತಿಕ ಕ್ಯಾನ್ಸರ್ ಕಾಯಿಲೆಗೆ ತುತ್ತಾಗಬೇಕಾಗುತ್ತದೆ. ಮಹಿಳೆಯರು ತಂಬಾಕು ಸೇವನೆ ಮಾಡುವುದರಿಂದ ಹುಟ್ಟುವ ಮಗು ಕೂಡ ಆರೋಗ್ಯ ಸಮಸ್ಯೆ ಎದುರಿಸಬೇಕಾಗುತ್ತದೆ. ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕೆ ಎಲ್ಲರೂ ಮುಂದಾಗಬೇಕು' ಎಂದು ಜಿಲ್ಲಾ ಆರೋಗ್ಯ ಇಲಾಖೆಯ ಸಾಮಾಜಿಕ ಮೇಲ್ವಿಚಾರಕಿ ಸರಸ್ವತಿ ಹೇಳಿದರು.

ಸಮೀಪದ ಬೆಟಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ತಂಬಾಕು ಮುಕ್ತ ಅಭಿಯಾನ ಅಂಗವಾಗಿ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶಿಕ್ಷಕ ಮರ್ದಾನಲಿ ಗಡಾದ ಮಾತನಾಡಿ, 'ಸದೃಢ ಸಮಾಜ ಕಟ್ಟುವಲ್ಲಿ ಯುವಕರ ಪಾತ್ರ ಅತಿ ಮುಖ್ಯ. ಆದರೆ ಇಂದಿನ ಯುವಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಧೂಮಪಾನ, ಮದ್ಯಪಾನಂತಹ ದುಶ್ಚಟಗಳ ದಾಸರಾಗಿ ತಮ್ಮ ಸುಂದರ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದರು. ಶಿಕ್ಷಕ ಗಿರಿಯಪ್ಪ ಹಾರನಹಳ್ಳಿ ಮಾತನಾಡಿದರು. ಶಿಕ್ಷಕರಾದ ರವಿಕಿರಣ್ ಟಿಕಾರೆ, ಪ್ರಕಾಶರೆಡ್ಡಿ ಗೋವಿಂದರೆಡ್ಡಿ, ಶಾಂತಂವೀರಯ್ಯ ಕಳ್ಳಿಮಠ, ಸೋಮಣ್ಣ ತಳಕಲ್ ಪರಶುರಾಮ ಯಡವಟ್ಟಿ ಹಾಗೂ ಇತರರು ಇದ್ದರು.

## ಮುದ್ದೇಬಿಹಾಳದಲ್ಲಿ ಟಾಲೆಂಟ್ ಹಂಟ್ ಪರೀಕ್ಷೆ ಘೋಷಣೆ




ನೈಜ್ಯ ದೆಸೆ ನ್ಯೂಸ್

ಮುದ್ದೇಬಿಹಾಳ: ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಉತ್ತೇಜಿಸುವ ಉದ್ದೇಶದಿಂದ ಆಕ್ಸ್ಫರ್ಡ್ ಕೋಚಿಂಗ್ ಮತ್ತು ಪಬ್ಲಿಕ್ ಸ್ಕೂಲ್ ವತಿಯಿಂದ "ಚಾಣಕ್ಯ ಟಾಲೆಂಟ್ ಹಂಟ್ ಪರೀಕ್ಷೆ?2026" ಆಯೋಜಿಸಲಾಗಿದೆ.

ಈ ಪರೀಕ್ಷೆ ಫೆಬ್ರವರಿ 8, 2026 ರಂದು ಬೆಳಿಗ್ಗೆ 11:30ಕ್ಕೆ ಮುದ್ದೇಬಿಹಾಳದ ಮಾರುತಿ ನಗರದಲ್ಲಿರುವ ಆಕ್ಸ್ಫರ್ಡ್ ಪಬ್ಲಿಕ್ ಸ್ಕೂಲ್‌ನಲ್ಲಿ ನಡೆಯಲಿದೆ. 3ರಿಂದ 9ನೇ ತರಗತಿ ವಿದ್ಯಾರ್ಥಿಗಳು ಈ ಪರೀಕ್ಷೆಯಲ್ಲಿ ಭಾಗವಹಿಸಬಹುದಾಗಿದೆ. ಪರೀಕ್ಷೆಯಲ್ಲಿ ಕನ್ನಡ, ಇಂಗ್ಲಿಷ್ ವ್ಯಾಕರಣ, ಗಣಿತ, ವಿಜ್ಞಾನ ಹಾಗೂ ಐಕ್ಯೂ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಇರಲಿವೆ. ಒಟ್ಟು 100 ಪ್ರಶ್ನೆಗಳಿರುವ ಈ ಪರೀಕ್ಷೆಗೆ 120 ನಿಮಿಷಗಳ ಅವಧಿ ನಿಗದಿಪಡಿಸಲಾಗಿದೆ.


ಪರೀಕ್ಷೆಗೆ ಬರುವ ವಿದ್ಯಾರ್ಥಿಗಳು ತಮ್ಮ ಶಾಲಾ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ತರಬೇಕೆಂದು ಶಾಲಾ ಆಡಳಿತ ಮಂಡಳಿ ತಿಳಿಸಿದೆ. ಇದೇ ಸಂದರ್ಭದಲ್ಲಿ ಶಾಲೆಯಲ್ಲಿ ಸಮ್ಮರ್ ಕ್ಯಾಂಪ್-2026 ಪ್ರವೇಶವೂ ಆರಂಭಗೊಂಡಿದ್ದು, ವಿವಿಧ ತರಗತಿಗಳ ವಿದ್ಯಾರ್ಥಿಗಳಿಗೆ ಮೂಲಭೂತ ಶಿಕ್ಷಣ ಮತ್ತು ವಿಷಯಾಧಾರಿತ ತರಬೇತಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಆಸಕ್ತರು 9844835696, 9148650860 ಅಥವಾ 8861729836 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ತನುಶ್ರೀ ಕುಟುಂಬಕ್ಕೆ 50 ಸಾವಿರ ನಗದು ಸಾಂತ್ವನ ಧೈರ್ಯ ತುಂಬಿದ: ಶಾಸಕ ಬಸನಗೌಡ ತುರ್ವಿಹಾಳ

ನೈಜ್ಯ ದೆಸೆ ನ್ಯೂಸ್

ತಾಲೂಕಿನ ಕುರುಕುಂದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ವಿದ್ಯುತ್ ಅವಘಡದಿಂದ ಮೃತಪಟ್ಟ 5 ನೇ ತರಗತಿ ವಿದ್ಯಾರ್ಥಿನಿ ತನುಶ್ರೀ ಅವರ ಕುಟುಂಬಸ್ಥರಿಗೆ ಶಾಸಕರು ಹಾಗೂ ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಬಸನಗೌಡ ತುರ್ವಿಹಾಳ ಭೇಟಿ ನೀಡಿ ಸಾಂತ್ವನ ನೀಡಿದರು.

ಗುರುವಾರ ತಾಲೂಕಿನ ಕುರುಕುಂದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯುತ್ ಅವಘಡದಿಂದ ಸಾವನ್ನಪ್ಪಿದ 5 ನೇ ತರಗತಿ ವಿದ್ಯಾರ್ಥಿನಿ ತನುಶ್ರೀ ತಂದೆ ಶಾಮಣ್ಣ ಭಜಂತ್ರಿ ಕುಟುಂಬದವರಿಗೆ ಮಸ್ಕಿ ಶಾಸಕ ಆರ್.ಬಸನಗೌಡ ತುರ್ವಿಹಾಳ 50 ಸಾವಿರ ನಗದು ನೀಡಿ, ಸಾಂತ್ವನ ಹೇಳಿ ಧೈರ್ಯ ತುಂಬಿದರು.



ಈ ಸಂದರ್ಭದಲ್ಲಿ: ಮುಖಂಡರಾದ ಬಸವರಾಜ ಪಗಡದಿನ್ನಿ, ಮಹಾಂತಪ್ಪ ಸಾಹುಕಾರ ಬಪ್ಪೂರು, ಬಸವರಾಜ ಸಿಂಧನೂರು, ಬಿಎಂಕೆ.ದೇವಣ್ಣ ಬಪ್ಪೂರು, ಚಂದ್ರಶೇಖರ ತಿಡಿಗೋಳ, ಭೀಮಣ್ಣ, ಹುಲುಗಪ್ಪ, ನಾಗರಾಜ ಪೊ.ಪಾ, ನಾಗಪ್ಪ ಡಂಕನಕಲ್, ಗ್ರಾ.ಪಂ. ಸದಸ್ಯ ಪಂಪಣ್ಣ ಹಲಗಿ, ಅಂಬಣ್ಣ ನಾಯಕ ಹಾಗೂ ಯಮನೂರ ನಾಯಕ, ಶರಣಪ್ಪ ಭಜಂತ್ರಿ, ನಿರುಪಾದಿ ಭೋವಿ, ಗುಡದಪ್ಪ ಶೇಶಿಗೇರಿ, ವಿಜಯಕುಮಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಿಂಧನೂರಿನ ಕಾರುಣ್ಯಾಶ್ರಮವು ಪುಣ್ಯಕ್ಷೇತ್ರವಾಗಿ ಮಾನವೀಯತೆಯ ಮಂದಿರವಾಗಿದೆ: ಸಂಗೀತ ನಾಡಗೌಡ್ರು

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕರ್ನಾಟಕ ಕಟ್ಟಡ ನಿರ್ಮಾಣ ಹಾಗೂ ಕಟ್ಟಿಗೆ ಸಾಮಗ್ರಿಗಳ ಕಾರ್ಮಿಕರ ಫೆಡ್ ರೇಷನ್ ಸಮಿತಿಯ ರಾಜ್ಯ ಮಹಿಳಾ ಅಧ್ಯಕ್ಷರಾದ ಸಂಗೀತಾ ನಾಡಗೌಡ್ರು ಮುದ್ದೇಬಿಹಾಳ ಹಾಗೂ ದಿ. ತಾಳಿಕೋಟಿ ಸಹಕಾರಿ ಬ್ಯಾಂಕ್ ನಿಯಮಿತ ತಾಳಿಕೋಟಿ ಪ್ರಧಾನ ಶಾಖೆಯ ಪ್ರಧಾನ ವ್ಯವಸ್ಥಾಪಕರಾದ ಬಸಮ್ಮ ಕಾಶಿರಾಯ ಮಣ್ಣೂರು ಇವರುಗಳು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಭೇಟಿ ನೀಡಿ ಆಶ್ರಮದಲ್ಲಿನ ಆಶ್ರಯದಾತುರುಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಿ ಆತ್ಮಸ್ಥೈರ್ಯ ತುಂಬಿದರು.

ಈ ಸಮಯದಲ್ಲಿ ಕಾರುಣ್ಯ ಆಶ್ರಮದ ಸದಸ್ಯರಾದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ




ಕರಡಕಲ್ ಸಾ. ಲಿಂಗಸೂಗೂರು ಇವರನ್ನು ಸನ್ಮಾನಿಸಿ ಗೌರವಿಸಿದರು. ಇದೇ ಸಮಯದಲ್ಲಿ ಸಂಗೀತ ನಾಡಗೌಡ್ರು ಮುದ್ದೇಬಿಹಾಳ ಬಸಮ್ಮ ಕಾ. ಮಣ್ಣೂರು ತಾಳಿಕೋಟಿ ಇವರುಗಳನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ನಂತರ ಮಾತನಾಡಿದ ಕೆಪಿಸಿಸಿಯ ಕೆ.ಕೆ.ಎನ್. ಕೆ. ಸಾ. ಕಾ. ಫೇ. ರಾಜ್ಯ ಮಹಿಳಾ ಅಧ್ಯಕ್ಷರಾದ ಸಂಗೀತ ನಾಡಗೌಡ್ರು ಮಾತನಾಡಿ ನಾವುಗಳು ಕಾರುಣ್ಯ ಆಶ್ರಮದ ಬಗ್ಗೆ ಕೇಳುತ್ತಿದ್ದೆವು ಆದರೆ ಇಂದಿನ ವಾಸ್ತವ ಸ್ಥಿತಿ ನೋಡಿದಾಗ ಮಾನವರಾದ ನಾವುಗಳು ನಮಗೆ ಜನ್ಮ ಜೀವ ಜೀವನವನ್ನು ರೂಪಿಸಿ ಕೊಟ್ಟಂತಹ ತಂದೆ ತಾಯಿಗಳನ್ನು ಇಂತಹ ವೃದ್ಧಾಶ್ರಮಕ್ಕೆ ತಳ್ಳುತ್ತಿರುವದು ದುರದೃಷ್ಟಕರ ಸಂಗತಿ.

ಈಗಾಗಲೇ ಇಲ್ಲಿನ ಸಿಬ್ಬಂದಿಗಳು ಈ ಆಶ್ರಮವು ಕರ್ಮಭೂಮಿ ಎಂದು ಹೇಳುತ್ತಿರುವ ಅಂಶಗಳನ್ನು ನಾನು ಅರಿತು ಕೊಂಡಾಗ ಕಾರುಣ್ಯಾಶ್ರಮವು ಕರ್ಮಭೂಮಿಯಲ್ಲ ಪುಣ್ಯಕ್ಷೇತ್ರವಿದು ಎಂದೆನಿಸಿದೆ. ಸಿಂಧನೂರಿನ ಕಾರುಣ್ಯಾಶ್ರಮವು ಪುಣ್ಯಕ್ಷೇತ್ರವಾಗಿ ಮಾನವೀಯತೆಯ ಮಂದಿರವಾಗಿದೆ. ಇಂತಹ ಮಂದಿರಕ್ಕೆ ಸಹಾಯ ಸಹಕಾರ ಮಾಡುವ ದಾನಿಗಳೇ ನಿಜವಾದ ಭಕ್ತರುಗಳು ನಾನು ನನ್ನದು ಎನ್ನುವ ಈ ಸ್ವಾರ್ಥ ಪ್ರಪಂಚದಲ್ಲಿ ನಿಸ್ವಾರ್ಥತೆಯ ಬದುಕನ್ನು ಕಟ್ಟಿಕೊಂಡು ರಾಜ್ಯಕ್ಕೆ ಮಾದರಿಯಾಗಿ ಪ್ರಾಮಾಣಿಕವಾಗಿ ಸೇವೆ ಮಾಡುತ್ತಿರುವ ಕಾರುಣ್ಯಾಶ್ರಮಕ್ಕೆ ಮುಂದಿನ ದಿನಮಾನಗಳಲ್ಲಿ ನಮ್ಮ ಕುಟುಂಬದಿಂದ ಹಾಗೂ ಸರ್ಕಾರದ ವ್ಯವಸ್ಥೆಯಲ್ಲಿ ಸೌಲಭ್ಯಗಳನ್ನು ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಮಾತನಾಡಿದರು.

ನಂತರ ದಿ. ತಾಳಿಕೋಟಿ ಸಹಕಾರ ಬ್ಯಾಂಕ್ ನಿಯಮಿತ ತಾಳಿಕೋಟೆಯ ಪ್ರಧಾನ ಶಾಖೆಯ ಪ್ರಧಾನ ವ್ಯವಸ್ಥಾಪಕರಾದ ಬಸಮ್ಮ ಮಣ್ಣೂರು ಮಾತನಾಡಿ ಹುಟ್ಟು ಸಾವಿನ ಮಧ್ಯೆ ಮಾನವನ ಮಾನವೀಯತೆ ಪಾಠಶಾಲೆಯಾಗಿ ಕಾರುಣ್ಯಾಶ್ರಮವು ಮಾನವ ಧರ್ಮದ ಮಾನವೀಯತೆಯನ್ನು ಸಮಾಜಕ್ಕೆ ತೋರಿಸಿಕೊಟ್ಟಿದೆ. ಈ ನಮ್ಮ ಕಾರುಣ್ಯ ಕುಟುಂಬವು ಬರೀ ಅನಾಥಾಶ್ರಮ ನಡೆಸುವುದಲ್ಲದೆ ಜನರಲ್ಲಿ ಹೆತ್ತವರ ಬಗ್ಗೆ ಹಿರಿಯರ ಬಗ್ಗೆ ಹಲವಾರು ಅಭಿಮಾನಗಳನ್ನು ಹಮ್ಮಿಕೊಳ್ಳುವ ಮೂಲಕ ಸಮಾಜವನ್ನು ಶುದ್ಧೀಕರಣ ಮಾಡುವ ಕಾರ್ಯ ಮಾಡುತ್ತಿರುವುದು ನಮಗೆ ಸಂತೋಷವನ್ನುಂಟು ಮಾಡಿದೆ ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಹಿರೇಮಠ ಸದಸ್ಯರು ಶ್ರೀ ಮಠ ಸೇವಾ ಟ್ರಸ್ಟ್ ಕಾರುಣ್ಯ ಆಶ್ರಮ ಸಿಂಧನೂರು.. ಶರಣಪ್ಪ ನಾಯಕ ಕಸಬಾ ಲಿಂಗಸೂಗೂರು. ಸುಜಾತ ಹಿರೇಮಠ ಸದಸ್ಯರು ಶ್ರೀಮಠ ಸೇವಾ ಟ್ರಸ್ಟ್. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವಯ್ಯ ಸ್ವಾಮಿ ಹಿರೇಮಠ ಹರೇಟನೂರು. ಮತ್ತು ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ . ಸಿದ್ದಯ್ಯ ಸ್ವಾಮಿ ಮ-

## ಸಾಹಿತ್ಯ ಸಿಂಚನ

ಇನ್ನು ಬೇಕೆ ಬಂಧವು
ಅಂಚೆ ತಂದಿತು ಅಂಚೆ ಮಡಿಯಿಂದ ಮಡಿ ಸುದ್ದಿ
ಊರಿಗೂರು ಭಂಗವಂತೆ ಅರಸು ಏನು ಅರಸುವ

ಕಾಡಿನೊಳಗೆ ಕಾಡಿತೆನ್ನ ಅಂಬು ತಪ್ಪೆ ಅಂಬುವು ನಡು
ನಡಕೆ ಕೊಟ್ಟ ಏಟು ಕಾಲನು ಈ ಕಾಲಕೆ

ಹತ್ತು ಬಾರಿ ಹತ್ತಲೆಂದೆ ಮಳೆಗೆ ಮಳೆಯು ಸಾಟಿಯೆ ಕರದಿ
ಕರವು ಇರದೆ ಇರಲು ನರನ ನರವು ನರಕಕೆ

ಗುಂಡಿ ಒಳಗಿನ ಗುಂಡಿ ಬಟ್ಟೆಗದುವೆ ಬಟ್ಟೆಯೆ ದಳವೆ
ಅಡಿಗೆ ಅಡಿಗೆಯೆ ಹಿಂಡು ನಿನ್ನ ಹಿಂಡಿ

ಎಳೆಗೆ ಎಳೆಯು ಇಳೆಗೆ ಇಳೆಯೊ ಹೊಳೆಗೆ ಹೊಳೆವ
ಗುಣವಿದೆ ಕರೆಗೆ ಕರೆಯೊ ಬರೆಗೆ ಬರೆಯೋ ಎರಗು ಎರೆಗೆ
ನೀಡದೆ

ಬಲವು ಬಲಕೆ ಕಲಿಗೆ ಕಲಿಕೆ ಅಲೆಗೆ ಅಲೆ ಪೋಟಿಯೆ
ಸುಳಿಗೆ ಸುಳಿದೆ ಬಲೆಗೆ ಬಲೆಯೊ ಹಳಿಯ ಮೇಲಿನ
ಆಟವೊ

ಮುಡಿ ಮುಡಿಗೆ ಮಡಿ ಮಡಿಗೆ ಹರಿ ಭವವ ಹರಿವನು
ತಂದೆ ತಂದೆ ನಿಂದೆ ನಿಂದೆ ಇನ್ನು ಬೇಕೆ ಬಂಧವು

ತುಳಸಿದಾಸ ಬಿ ಎಸ್

## ಯದ್ದಲದೊಡ್ಡಿಯಲ್ಲಿ ಅಂಗನವಾಡಿ ರೂಮ್ ಬಂದ್! ಟೀಚರ್ ಬರುವುದನ್ನೇ ಕಾಯುತ್ತಾ ಬಿಸಿಲಿನಲ್ಲಿ ಕುಳಿತ ಮಕ್ಕಳು

❑ ನೈಜ್ಯ ದೆಸೆ ನ್ಯೂಸ್

**ತಾಲೂಕಿನ ಯದ್ದಲದೊಡ್ಡಿ ಗ್ರಾಮದಲ್ಲಿ 2022–23ನೇ ಸಾಲಿನ ಕಲ್ಯಾಣ ಕರ್ನಾಟಕದ (ಮೈಕ್ರೋ) ಅಭಿವೃದ್ಧಿ ಅನುದಾನದ ಯೋಜನಡಿಯಲ್ಲಿ ನಿರ್ಮಾಣವಾದ ಅಂಗನವಾಡಿ ಕೇಂದ್ರವು ಶುಕ್ರವಾರ ಮಧ್ಯಾಹ್ನ 1 ಗಂಟೆಯಾದರೂ ಕೂಡ ತೆರೆಯದಿದ್ದ ಕಾರಣ ಮಕ್ಕಳು ಹೊರಗಡೆ ಕಾಯುತ್ತಾ ಕುಳಿತ ದೃಶ್ಯ ಕಂಡು ಬಂತು!**



ಅಂಗನವಾಡಿ ಟೀಚರ್ ಪ್ರಮೀಳಾ ಅವರು, ದಿನವು ಟೈಮ್ ಸರಿಯಾಗಿ ಬರುವುದಿಲ್ಲ ಲೇಟಾಗಿ ಬರುತ್ತಾರೆ. ಸರಿಯಾಗಿ ಪಾಠ ಹೇಳುವುದಿಲ್ಲ. ಸರ್ಕಾರದಿಂದ ಎಲ್ಲಾ ದಿನಸಿ ಸಾಮಗ್ರಿಗಳು ಬಂದರು. ಮಕ್ಕಳಿಗೆ ಸರಿಯಾಗಿ ಕೊಡುವುದಿಲ್ಲ ಎಂದು ಗ್ರಾಮಸ್ಥರ ಆರೋಪವಿದೆ. ಸಂಬಂಧಪಟ್ಟ ಅಧಿಕಾರಿಗಳು ಅಂಗನವಾಡಿ ಟೀಚರ್ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ, ಮುಂದಿನ ದಿನಗಳಲ್ಲಿ ಪ್ರತಿಭಡಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಈ ವೇಳೆ ಟೀಚರ್ ಬರುವುದನ್ನೆ ಬಿಸಿಲಿನಲ್ಲಿ ಕಾಯುತ್ತಾ ಕುಳಿತಿದ್ದ ಮಕ್ಕಳನ್ನು ವಿಚಾರಿಸಿದರೆ ಒಂದೊಂದು ಸಾರಿ ಜಲ್ದಿ ಬರುತ್ತಾರೆ.

1ನೇ ಪುಟದಿಂದ....

ಬಣದಲ್ಲಿ ಕೇಳಿ ಬರುತ್ತಿದೆ. ನಾಯಕತ್ವ ಗೊಂದಲವನ್ನು ನಿವಾ–ರಿಸುವುದೇ ಕಾಂಗ್ರೆಸ್ ವರಿಷ್ಠರಿಗೆ ಕಬ್ಬಿಣದ ಕಡಲೆಯಾಗಿದೆ. ಈಗಿರುವ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾವಣೆ ಮಾಡಿದರೆ ಅಹಿಂದ ವರ್ಗ ಸಿಡಿದು ಬೀಳುವ ಆತಂಕ ಇದೆ. ಡಿ.ಕೆ.ಶಿವಕುಮಾರ್ ಪಕ್ಷಕ್ಕಾಗಿ ದುಡಿದವರು, ನಿಷ್ಠರು. ಅವರಿಗೆ ಅವರಿಗೆ ಅವಕಾಶ ನೀಡದೆ ಇದ್ದರೆ ಪಕ್ಷಕ್ಕಾಗಿ ದುಡಿದವರಿಗೆ ಮಾನ್ಯತೆ ಇರುವುದಿಲ್ಲ ಎಂಬ ಕೆಟ್ಟ ಸಂದೇಶ ರವಾನೆಯಾಗುತ್ತದೆ. ಈ ಇಬ್ಬಂದಿತನದಲ್ಲೇ ಹೈಕಮಾಂಡ್ ಉಳಿದಂತಿದೆ. ನಾಯಕತ್ವ ಬದಲಾವಣೆ ಇಲ್ಲ ಎಂಬ ಸಂದೇಶ ರವಾನಿಸಿದರೆ ಸಿದ್ದರಾಮಯ್ಯ ಮತ್ತವರ ಬೆಂಬಲಿಗರು ಏಕಮೇವಾದ್ವಿತೀಯರಾಗಿ ಮೆರೆಯುವ ಸಾಧ್ಯತೆ ಇದೆ. ಕೆಲ ಸಂದರ್ಭಗಳಲ್ಲಿ ಹೈಕಮಾಂಡ್ ಮಾತಿಗೂ ಕವಡೆ ಕಾಸಿನ ಕಿಮತ್ತು ನೀಡದೆ ಹೋಗಬಹುದು. ಅದಕ್ಕಾಗಿ ಡಿ.ಕೆ.ಶಿವಕುಮಾರ್ ಅವರಂತಹ ಪ್ರಬಲ ಸ್ಪರ್ಧಿ ಅಖಾಡದಲ್ಲೇ ಉಳಿದಿರುವುದು ಹೈಕಮಾಂಡ್‌ಗೆ ಹೆಚ್ಚು ಲಾಭದಾಯಕ ಎಂಬ ಚರ್ಚೆಗಳಿವೆ. ಅದಕ್ಕಾಗಿ ನಾಯಕತ್ವ ಬದಲಾವಣೆ ಕುರಿತು ಬಹಿರಂಗವಾಗಿ ಹೇಳಿಕೆ ನೀಡುವ ಡಿ.ಕೆ.ಶಿವಕುಮಾರ್ ಬಣದ ಶಾಸಕರ ವಿರುದ್ಧ ಈವರೆಗೂ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಹೇಳಲಾಗಿದೆ. ರಾಜ್ಯದಲ್ಲಿ ಗೊಂದಲ ತೀವ್ರಗೊಂಡರೆ ಉಕ್ಕುವ ಹಾಲಿಗೆ ನೀರು ಚಿಮುಕಿಸಿದಂತೆ ಆಗೊಂದಿಷ್ಟು ಸಮಾಧಾನ ಮಾಡಿ ಹೈಕಮಾಂಡ್ ತನ್ನ ಪಾಡಿಗೆ ತಾನು ಉಳಿದು ಬಿಡುತ್ತಿದೆ. ಹೈಕಮಾಂಡ್ ನಿಲುವು ಮತ್ತು ಒಲವುಗಳನ್ನು ಅರ್ಥೈಸಿಕೊಂಡಿರುವ ಸಿದ್ದರಾಮಯ್ಯ ಸದ್ಯಕ್ಕೆ ನಿರಾಳರಾಗಿದ್ದಾರೆ. ತಮ ಪಾಡಿಗೆ ತಾವು ಬಜೆಟ್ ಪೂರ್ವ ತಯಾರಿಯಲ್ಲಿ ತೊಡಗಿಸಿಕೊಂಡಿದ್ದಾರೆ.

# ವಾಲ್ಮೀಕಿ ನಾಯಕ ಸಮಾಜದಿಂದ ಮಸ್ಕಿ ಶಾಸಕರ ಕಛೇರಿಯಲ್ಲಿ ಪ್ರತಿಭಟನೆ ಧರಣಿ

❑ ನೈಜ್ಯ ದೆಸೆ ನ್ಯೂಸ್




ಮಸ್ಕಿ: ಪರಿಶಿಷ್ಟ ಪಂಗಡ ಹೆಸರಿನಲ್ಲಿ ನಕಲಿ ಜಾತಿಯ ಪ್ರಮಾಣ ಪತ್ರ ವಿತರಣೆ ತಡೆಗಟ್ಟುವಲ್ಲಿ ಶಾಸಕರ ವಿಫಲತೆಯನ್ನು ವಿರೋಧಿಸಿ ಹಾಗೂ ಪರಿಶಿಷ್ಟ ಪಂಗಡದ ಸಂವಿಧಾನಿಕ ಹಕ್ಕುಗಳ ರಕ್ಷಣೆಗಾಗಿ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರದಲ್ಲಿ ಗೆದ್ದಿರುವ 15 ಶಾಸಕರುಗಳ ಮನೆ ಮುಂದೆ ಪ್ರತಿಭಟನೆ ಧರಣಿ ಹಮ್ಮಿಕೊಳ್ಳಲಾಗಿದೆ ಎಂದು ಮಾರಪ್ಪ ನಾಯಕ ಅಧ್ಯಕ್ಷರು ಉತ್ತರ ಕರ್ನಾಟಕ ವಾಲ್ಮೀಕಿ ನಾಯಕ ಸಮಾಜ ಇವರು ಮಾತನಾಡುತ್ತಾ ಮಸ್ಕಿ ಕ್ಷೇತ್ರದ ಶಾಸಕರ ಕಚೇ–ರಿಯ ಮುಂದೆ ಈ ಪ್ರತಿಭಟನೆ ಹಮ್ಮಿಕೊಂಡಿದ್ದು, ನಮ್ಮ ಹಕ್ಕೂತ್ತಾಯಗಳಾದ ಹಿಂದುಳಿದ ವರ್ಗ ಒಂದರಲ್ಲಿ ಬರುವ ಕೂಲಿ ಜನಾಂಗದ ತಳವಾರರು ಪರಿಶಿಷ್ಟ ಪಂಗಡದ ನಾಯಕ, ತಳವಾರ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರ ಸಿಂಧುತ್ವ ತೆಗೆದುಕೊಳ್ಳುವುದನ್ನು ತಡೆಗಟ್ಟಬೇಕು, ಸುಳ್ಳು ಜಾತಿ ಪ್ರಮಾಣ ಪತ್ರ ನೀಡುವ ಅಧಿಕಾರಗಳ ಮೇಲೆ ಎಫ್ ಐ ಆರ್ ಆಲಿಸಿ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇವೆ ಹಾಗೆ ಇನ್ನು ಹಲವಾರು ಸಮಸ್ಯೆಗಳ ಕುರಿತು ಮಾರೆಪ್ಪ ನಾಯಕ ಮಾತನಾಡಿದರು. ನಂತರ ಮನವಿ ಪತ್ರವನ್ನು ಶಾಸಕರ ಪ್ರತಿನಿಧಿಯಾಗಿ ಆಗಮಿಸಿದ ಭೀಮೇಶ ನಾಯಕ್ ಅವರಿಗೆ ನೀಡಿದರು.

ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ಭೀಮೇಶ್ ನಾಯಕ ಶಾಸಕರಿಗೆ ಸಮಸ್ಯೆ ಕು–ರಿತು ಹೇಳಲಾಗುವುದೆಂದು ಎಂದು ಹೇಳಿದರು. ಈ ಸಂದರ್ಭದಲ್ಲಿ ಶ್ರವಣ ಕುಮಾರ್ ಡಿ ನಾಯಕ ರಾಜ್ಯಾಧ್ಯಕ್ಷರು ಎಸ್ಸಿ ಎಸ್ಟಿ ನಕಲಿ ಜಾತಿ ಪ್ರಮಾಣಪತ್ರ ಕಡೆ ಸಮಿತಿ, ಸಿದ್ದಲಿಂಗಪ್ಪ ನಾಯಕ, ಶರಣಪ್ಪ ಜಾಕನಹಳ್ಳಿ, ದೊಡ್ಡಯ್ಯ ನಾಯಕ, ಅಂಬಣ್ಣ ನಾಯಕ ಡೋಣಮರಡಿ, ಗಂಗಾಧರ್ ನಾಯಕ್ ಸುರಪುರ, ವೆಂಕಟೇಶ್ ನಾಯಕ ಕೋಳಬಾಳ, ರಮೇಶ್ ನಾಯಕ ತೀರ್ಥಭಾವಿ, ಬಸಪ್ಪ ನಾಯಕ ತುಗ್ಗಲದಿನ್ನಿ, ವೆಂಕಟೇಶ್ ನಾಯಕ್ ಮಸ್ಕಿ, ದೊಡ್ಡ ಜಕ್ಕಪ್ಪ ನಾಯಕ ಹಾಗೂ ಇನ್ನಿತರರು ಇದ್ದರು.

# ಇಂದು ವಿವಿಧ ಜಯಂತಿಗಳ ಪೂರ್ವಭಾವಿ ಸಭೆ







❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಆಚರಿಸಲಿರುವ ವಿವಿಧ ಮಹಾಪುರುಷರ ಜಯಂತಿಗಳ ಕುರಿತು ಚರ್ಚಿಸಲು ಇಂದು (ಫೆ.7) ಪೂರ್ವಭಾವಿ ಸಭೆ ಕರೆಯಲಾಗಿದೆ.**

ಮುಂಜಾನೆ 11:00 ಘಂಟೆಗೆ ತಹಸಿಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ನಡೆಯಲಿರುವ ಈ ಸಭೆಯ ಅಧ್ಯಕ್ಷತೆಯನ್ನು ತಹಸಿಲ್ದಾರ್ ಡಾ.ವಿನಯಾ ಹೂಗಾರ ವಹಿಸುವರು.ದಿನಾಂಕ 15–02–2026 ರಂದು ಆಚರಿಸಲಿರುವ ಶ್ರೀ ಸಂತ ಸೇವಾಲಾಲ್ ಮಹಾರಾಜರ ಜಯಂತಿ, ದಿನಾಂಕ 19.2.2026ರಂದು ನಡೆಯಲಿರುವ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಹಾಗೂ ದಿನಾಂಕ 20–02–2026ರಂದು ಆಚರಿಸಲಿರುವ ಕವಿ ಸರ್ವಜ್ಞನವರ ಜಯಂತಿ ಕುರಿತು ಸದರಿ ಸಭೆಯಲ್ಲಿ ಚರ್ಚಿಸಲಾಗುವುದು. ಸಭೆಗೆ ಸಂಬಂಧಿಸಿದ ಸಮಾಜಗಳ ಮುಖ್ಯಸ್ಥರು ಹಾಗೂ ಪಟ್ಟಣದ ಗಣ್ಯ ಮಾನ್ಯರು ಸಕಾಲಕ್ಕೆ ಆಗಮಿಸಿ ತಮ್ಮ ಸಲಹೆ ಸೂಚನೆಗಳು ನೀಡಬೇಕೆಂದು ತಾಲೂಕ ಆಡಳಿತದ ಪ್ರಕಟಣೆ ತಿಳಿಸಿದೆ.

# ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನಾ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್




**ಎಂಪಾಯಿರ್ ಸೋಲಾರ ಕಂಪನಿಯ ಶೈಕ್ಷಣಿಕ ಹಾಗೂ ಸಾಮಾಜಿಕ ಕಳಕಳಿ ಮೆಚ್ಚುವಂತದ್ದು' ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಲಕ್ಷ್ಮಣ ಹಿರೇಖೇಡ ತಿಳಿಸಿದರು. ಸಮೀಪದ ಸೂಳೇಕಲ್ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಈಚೆಗೆ ನಡೆದ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.**

ಕಂಪನಿಯವರು ಪಂಚಾಯಿತಿ ವ್ಯಾಪ್ತಿಯ ಕಲಕೇರಿ, ತಿಪ್ಪನಾಳ, ಸುಳೇಕಲ್ ಹಾಗೂ ಬೆನಕನಾಳ ಗ್ರಾಮದಲ್ಲಿ ಒಟ್ಟು 80 ಸೋಲಾರ್ ಬೀದಿ ದೀಪಗಳನ್ನು ಅಳವಡಿಸಿದ್ದಲ್ಲದೇ ರೈತರಿಗೆ ಬಯೋ ಗ್ಯಾಸ್ ನೀಡಿ ಅನುಕೂಲ ಮಾಡಿದ್ದಾರೆ ಎಂದು ಸ್ಮರಿಸಿದರು. ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಶಿವಾನಂದ ವಂಕಲಕುಂಟಿ, ಪ್ರಭಾರ ಮುಖ್ಯಶಿಕ್ಷಕ ಸಿದ್ದರೂಡ ಬಣಕಾರ ಮಾತನಾಡಿದರು. ಸೋಲಾರ ಕಂಪನಿಯ ಹವಾಮಾನ ನಿಧಿ ವ್ಯವಸ್ಥಾಪಕ ಕ್ಲೇರ್, ಟಿಯೋಡೋರಾ, ಫ್ಲೂರ್, ಲೂಯಿಸಾ, ಆಶಿಶ್ ಆಂಪಿರ್, ಮೋನಿಕಾ ಆಂಪಿರ್, ಪೂಜಾ ಇಕನೆಕ್ಟ್, ಬಸವರಾಜ ಶೆಟ್ಟರ್, ಉಪಮನ್ಯು ಪಾಟೀಲ, ಎಸ್‌ಡಿ–ಎಂಸಿ ಅಧ್ಯಕ್ಷ ಲಿಂಗಪ್ಪ, ಕೃಷಿ ಪ್ರಾಥಮಿಕ ಪತ್ತಿನಸಹಕಾರಿ ಸಂಘದ ಅಧ್ಯಕ್ಷ ಪ್ರಭಾಕರ, ಎಸ್‌ಡಿಎಂಸಿ ಸದಸ್ಯ ಎಂ.ವೀರಭದ್ರಪ್ಪ, ಶರಣೆಗೌಡ, ಈರಣ್ಣ ಹೇರೂರು, ಪ್ರಮುಖರಾದ ಗಂಗಣ್ಣ ಗಣಗೂರು, ಮೈನುಸಾಬ ಸೂಳೇಕಲ್, ಮೌನೇಶ ಬಡಿಗೇರ ಇದ್ದರು.

# ಗ್ರಾಮೀಣ ಕ್ರೀಡೆಗಳಿಗೆ ಉತ್ತೇಜಿಸಿದ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ: ಸಾರ್ವಜನಿಕರಿಂದ ಹರ್ಷ

❑ ನೈಜ್ಯ ದೆಸೆ ನ್ಯೂಸ್




**ರಾಯಚೂರು: ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವವು ಗ್ರಾಮೀಣ ಕ್ರೀಡೆಗಳಿಗೆ ಉತ್ತೇಜನ ನೀಡುತ್ತಿದ್ದು, ಸ್ಪರ್ಧಾ ವೀಕ್ಷಿಸಲು ವಿದ್ಯಾರ್ಥಿಗಳು, ಯುವಜನರು ಹಾಗೂ ಸಾರ್ವಜನಿಕರು ಅತ್ಯಂತ ಉತ್ಸಾಹದಿಂದ ವೀಕ್ಷಿಸಿ, ಹರ್ಷ ವ್ಯಕ್ತಪಡಿಸಿದರು.**

ಹೌದು ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ಪ್ರಯುಕ್ತ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜಿಲ್ಲೆಯ ಇತರೆ ಇಲಾಖೆಗಳ ಸಂಂ–ಯುಕ್ತಾಶ್ರಯದಲ್ಲಿ ಕ್ರೀಡಾಕೂಟ ಹಮ್ಮಿಕೊಂಡಿದ್ದು, ಕಳೆದ ಜನವರಿ 16 ರಿಂದಲೇ ವಿವಿಧ ಸ್ಪರ್ಧೆಗಳು ಪ್ರಾರಂಭಗೊಂಡು ಸೈಕ್ಲಿಂಗ್ ಮ್ಯಾರಥಾನ್ ಹಾಗೂ ಮ್ಯಾರಥಾನ್ ಓಟ, ಬಾಡಿ ಬಿಲ್ಡಿಂಗ್ ಸೇರಿದಂತೆ ವಿವಿಧ ಸ್ಪರ್ಧೆಗಳು ಈಗಾಗಲೆ ಯಶಸ್ವಿಯಾಗಿ ಜರುಗಿದ್ದು, ಫೆ. 6 ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಸಂಗ್ರಾಣಿ ಕಲ್ಲು, ಉಸುಕಿನ ಮೂಟೆ ಎತ್ತುವ ಮತ್ತು ಕುಸ್ತಿ ಸೇರಿದಂತೆ ವಿವಿಧ ಗ್ರಾಮೀಣ ಕ್ರೀಡೆಗಳು ಜನರ ಮೆಚ್ಚುಗೆಯನ್ನು ಪಡೆದುಕೊಂಡವು.

ಶುಕ್ರವಾರನಡೆದ ಗ್ರಾಮೀಣ ಕ್ರೀಡಾ ಸ್ಪರ್ಧೆಗಳಿಗೆ ರಾಯಚೂರು ಮಹಾನಗರ ಪಾಲಿಕೆಯ ಉಪ ಆಯುಕ್ತೆ ಸಂತೋಷ ರಾಣಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿರೇಶ್ ನಾಯಕ ಅವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಕೆ.ಡಿ ಬಡಿಗೇರ, ಆಹಾರ ಇಲಾಖೆಯ ಉಪನಿರ್ದೇಶಕ ನಾಸೀರ ಅಹ್ಮದ್, ಶಿಕ್ಷಣ ಇಲಾಖೆಯ ರಂಗಸ್ವಾಮಿ, ಪಾಲಿಕೆ ಎಇ ಮಹೇಶ, ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ದೈಹಿಕ ಶಿಕ್ಷಕರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಅತ್ಯಂತ ರೋಚಕತೆಯಿಂದ ಕೂಡಿದ್ದ ಸಂಗ್ರಾಣಿ ಕಲ್ಲು, ಉಸುಕಿನ ಮೂಟೆ ಎತ್ತುವ ಮತ್ತು ಕುಸ್ತಿ ಸ್ಪರ್ಧೆಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಕ್ರೀಡಾಪಟುಗಳು ಭಾಗವಹಿಸಿದ್ದರು. ಸಾರ್ವಜನಿಕರು ಬಿಸಿಲಿನ ತಾಪವನ್ನು ಲೆಕ್ಕಿಸದೆ ಕುತೂಹಲದಿಂದ ಈ ಸ್ಪರ್ಧೆಗಳನ್ನು ವೀಕ್ಷಿಸಿ, ಚಪ್ಪಾಳೆ ಹಾಗೂ ಸಿಳ್ಳು ಹಾಕುವ ಮೂಲಕ ಸ್ಪರ್ಧಾಳುಗಳನ್ನು ಹುರಿದುಂಬಿಸುತ್ತಿರುವುದು ಕಂಡುಬಂತು.

ಸಂಗ್ರಹಣೆ ಕಲ್ಲು ಎತ್ತುವ ಸ್ಪರ್ಧೆಯ ವಿಜೇತರು: ಸಂಗ್ರಾಣಿ ಕಲ್ಲು ಎತ್ತುವ ಸ್ಪರ್ಧೆಯಲ್ಲಿ ಸುಮಾರು 100 ಕ್ಕೂ ಅಧಿಕ ಸಂಖ್ಯೆಯಲ್ಲಿ ಸ್ಪರ್ಧಾಳುಗಳು ಭಾಗವಹಿಸಿದ್ದು, ಇದರಲ್ಲಿ ರಾಮು ತೆಲಂಗಾಣ ಅವರು ಪ್ರಥಮ ಸ್ಥಾನ ಪಡೆದುಕೊಂಡರು. ಅದೇ ರಿತಿ ಪ್ರತಾಪ್ ನಾಯಕ ನಾಗನದೊಡ್ಡಿ ದ್ವಿತೀಯ ಮತ್ತು ಪ್ರಕಾಶ ಯಾದವ್ ಅವರು ತೃತೀಯ ಸ್ಥಾನವನ್ನು ಪಡೆದುಕೊಂಡರು.

ಉಸುಕಿನ ಮೂಟೆ ಎತ್ತುವ ಸ್ಪರ್ಧೆ: ಉಸುಕಿನ ಮೂಟೆ ಎತ್ತುವ ಸ್ಪರ್ಧೆಯಲ್ಲಿ ಸುಮಾರು 30 ಕ್ಕೂ ಅಧಿಕ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸಿದ್ದು, ಇದರಲ್ಲಿ ಮರಿಯಪ್ಪ ಅವರು 230 ಕೆಜಿ ಉಸುಕಿನ ಮೂಟೆ ಎತ್ತುವ ಮೂಲಕ ಪ್ರಥಮ ಸ್ಥಾನ ಪಡೆದರು. ಅದೇ ರಿತಿ ಸಕ್ರಪ್ಪ ನಾಯಕ ಅವರು 210 ಕೆಜಿ ಎತ್ತುವುದರೊಂದಿಗೆ ದ್ವಿತೀಯ ಸ್ಥಾನ ಪಡೆದರೆ, ಶಿವಕುಮಾರ ಅವರು 200 ಕೆಜಿ ತೃತೀಯ ಸ್ಥಾನವನ್ನು ಪಡೆದುಕೊಂಡರು. ಕುಸ್ತಿ ಸ್ಪರ್ಧೆಯ ವಿಜೇತರು: ಕುಸ್ತಿ ಸ್ಪರ್ಧೆಯಲ್ಲಿ 56 ಕುಸ್ತಿಪಡುಗಳು ಭಾಗವಹಿಸಿದ್ದು, ಪುರುಷರ ಕುಸ್ತಿ ಸ್ಪರ್ಧೆಯಲ್ಲಿ 'ಬಸವರಾಜ ಪಾಟೀಲ್ ಅವರು ಎಡೆದೊರೆ ಕಂಠೀರವ, ಹನುಮಂತ ಮರಮ್ಮನಹಳ್ಳಿ ಎಡೆದೊರೆ ಕೇಸರಿ, ಯೋಗೇಶ ಎಡೆದೊರೆ ಕಿಶೋರ ಹಾಗೂ ಮಾರುತಿ ಅವರು ಎಡೆದೊರೆ ಕುಮಾರ' ಕುಸ್ತಿ ಗಧೆ ಗೆದ್ದರು. ಮಹಿಳೆಯರ ಕುಸ್ತಿ ಸ್ಪರ್ಧೆಯಲ್ಲಿ ಜಲಜಾಕ್ಷಿ ಎಸ್ ಅವರು ಎಡೆದೊರೆ ಕಿಶೋರಿ ಮತ್ತು ಸತ್ಯಶ್ರೀ ಅವರು ಎಡೆದೊರೆ ಕುಮಾರಿ' ಕುಸ್ತಿ ಗಧೆ ಪಡೆದುಕೊಂಡರು.

# ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವಕ್ಕೆ ಅದ್ದೂರಿ ಚಾಲನೆ

❑ ನೈಜ್ಯ ದೆಸೆ ನ್ಯೂಸ್





**ರಾಯಚೂರು: ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವಕ್ಕೆ ನಗರದಲ್ಲಿ ಗುರುವಾರ ಅದ್ದೂರಿ ಚಾಲನೆ ದೊರೆಯಿತು. ಒಟ್ಟು ಐದು ವೇದಿಕೆಗಳಲ್ಲಿ ಕಲೆ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳು ಚಾಲನೆ ಪಡೆದುಕೊಂಡವು. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ರೀಡಾಂಗಣದ ಹಿಂಭಾಗದಲ್ಲಿ ನಿರ್ಮಿಸಲಾಗಿರುವ ಮುಖ್ಯವೇದಿಕೆ ಸಂಜೆಯಾಗುತ್ತಲೇ ಬಣ್ಣದ ಬೆಳಕಿನ ವಿದ್ಯುತ್ ದೀಪಗಳೊಂದಿಗೆ ಮೆರುಗು ಪಡೆದುಕೊಂಡಿತು. ಪಂಡಿತ ನರಸಿಂಹಲು ವಡವಟ್ಟಿ ಅವರಿಂದ ಕ್ಲಾ–ರಿನಿಯೊಟ್ ವಾದನ, ಶರಣಪ್ಪ ಗೋನಾಳ ಜಾನಪದ ಗೀತೆ, ವಿರೂಪಾಕ್ಷವಂದಲಿ, ಸುಗೂರೇಶ ಅಸ್ಕಿಹಾಳ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪ್ರಸ್ತುತ ಪಡಿಸಿದರು. ಒಟ್ಟು 10 ಪ್ರಮುಖ ಕಲಾವಿದರು ಕಾರ್ಯಕ್ರಮ ನೀಡಿ ಪ್ರೇಕ್ಷಕರ ಮನ ರಂಜಿಸಿದರು.**

ವೇದಿಕೆ–2ರಲ್ಲಿ 40 ಕಲಾವಿದರು ವಚನ, ಸುಗಮ ಸಂಗೀತ, ಭಜನೆ, ಭಕ್ತಿ ಸಂಗೀತ, ತತ್ವ ಪದ ಜಾನಪದ ಹಾಗೂ ಗಜಲ್ ಹಾಡಿದರು. ಭರತನಾಟ್ಯ, ಲಂಬಾಣಿನೃತ್ಯ ಹಾಗೂ ಸಮೂಹ ನೃತ್ಯ ಗಮನ ಸೆಳೆದವು. ವೇದಿಕೆ–3ರಲ್ಲಿ ಸಹ 48 ಕಲಾವಿದರು ಕಾರ್ಯಕ್ರಮ ನೀಡಿದರು. ಸಿದ್ಧರಾಮ ಜಂಬಲದಿನ್ನಿ ಜಿಲ್ಲಾ ರಂಗ ಮಂದಿರದಲ್ಲಿ ನಾಟಕ, ರಂಗಭೂಮಿ, ಬಯಲಾಟ ಪ್ರದರ್ಶನ ನಡೆದು ಒಟ್ಟು 12 ಕಲಾ ತಂಡಗಳು ಪ್ರೇಕ್ಷಕರ ಮನ ರಂಜಿಸಿದರು. ಮಹಿಳಾ ಸಮಾಜದ ಆವರಣದಲ್ಲಿ ಮೊದಲ ದಿನ ಕವಿಗೋಷ್ಠಿ ನಡೆಯಿತು. 75 ಕವಿಗಳು ತಮ್ಮ ಕವನಗಳನ್ನು ವಾಚಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ರಂಗಣ್ಣ ಪಾಟೀಲ ಅಳ್ಳುಂಡಿ ಉದ್ಘಾಟಿಸಿದರು. ಸಾಹಿತಿ ಗಿರಿರಾಜ ಹೊಸಮನಿ ಅಧ್ಯಕ್ಷತೆ ವಹಿಸಿದ್ದರು. ಪಂಡಿತ ನರಸಿಂಹಲು ವಡವಟ್ಟಿ ಅವರಿಂದ ಕ್ಲಾ–ರಿನಿಯೊಟ್ ವಾದನ, ಶರಣಪ್ಪ ಗೋನಾಳ ಜಾನಪದ ಗೀತೆ, ವಿರೂಪಾಕ್ಷವಂದಲಿ, ಸುಗೂರೇಶ ಅಸ್ಕಿಹಾಳ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪ್ರಸ್ತುತ ಪಡಿಸಿದರು. ಒಟ್ಟು 10 ಪ್ರಮುಖ ಕಲಾವಿದರು ಕಾರ್ಯಕ್ರಮ ನೀಡಿ ಪ್ರೇಕ್ಷಕರ ಮನ ರಂಜಿಸಿದರು. ವೇದಿಕೆ–2ರಲ್ಲಿ 40 ಕಲಾವಿದರು ವಚನ, ಸುಗಮ ಸಂಗೀತ, ಭಜನೆ, ಭಕ್ತಿ ಸಂಗೀತ, ತತ್ವ ಪದ ಜಾನಪದ ಹಾಗೂ ಗಜಲ್ ಹಾಡಿದರು. ಭರತನಾಟ್ಯ, ಲಂಬಾಣಿನೃತ್ಯ ಹಾಗೂ ಸಮೂಹ ನೃತ್ಯ ಗಮನ ಸೆಳೆದವು. ವೇದಿಕೆ–3ರಲ್ಲಿ ಸಹ 48 ಕಲಾವಿದರು ಕಾರ್ಯಕ್ರಮ ನೀಡಿದರು. ಸಿದ್ಧರಾಮ ಜಂಬಲದಿನ್ನಿ ಜಿಲ್ಲಾ ರಂಗ ಮಂದಿರದಲ್ಲಿ ನಾಟಕ, ರಂಗಭೂಮಿ, ಬಯಲಾಟ ಪ್ರದರ್ಶನ ನಡೆದು ಒಟ್ಟು 12 ಕಲಾ ತಂಡಗಳು ಪ್ರೇಕ್ಷಕರ ಮನ ರಂಜಿಸಿದರು. ಮಹಿಳಾ ಸಮಾಜದ ಆವರಣದಲ್ಲಿ ಮೊದಲ ದಿನ ಕವಿಗೋಷ್ಠಿ ನಡೆಯಿತು. 75 ಕವಿಗಳು ತಮ್ಮ ಕವನಗಳನ್ನು ವಾಚಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ರಂಗಣ್ಣ ಪಾಟೀಲ ಅಳ್ಳುಂಡಿ ಉದ್ಘಾಟಿಸಿದರು. ಸಾಹಿತಿ ಗಿರಿರಾಜ ಹೊಸಮನಿ ಅಧ್ಯಕ್ಷತೆ ವಹಿಸಿದ್ದರು.

ಗೊಂದಲಕ್ಕೀಡಾದ ಜನ: ಐದು ವೇದಿಕೆಗಳಲ್ಲಿ ಕಾರ್ಯಕ್ರಮ, ಕೃಷಿ ಮೇಳ, ಮತ್ಸ್ಯ ಮೇಳ, ಆಹಾರ ಮೇಳ, ವಿಶ್ವಕರ್ಮ ಮೇಳ, ಫಲಪುಷ್ಪ ಪ್ರದರ್ಶನ, ಚಿತ್ರಕಲಾ ಪ್ರದರ್ಶನ, ಮೆರವಣಿಗೆ, ಬೈಕ್ ರ್‍ಯಾಲಿ, ಹೆಲಿಕಾಪ್ಟರ್ ರೈಡಿಂಗ್, ಅಮೇ–ಜಿಂಗ್ ಪಾರ್ಕ್ ಹೀಗೆ ಹತ್ತು ಹಲವು ಕಾರ್ಯಕ್ರಮಗಳು ಏಕಕಾಲಕ್ಕೆ ಆರಂಭವಾದ ಕಾರಣ ಸಾರ್ವಜನಿಕರು ಯಾವ ಕಾರ್ಯಕ್ರಮಕ್ಕೆ ಹೋಗಬೇಕು ಎನ್ನುವ ಗೊಂದಲಕ್ಕೆ ಬಿದ್ದರು. ಜಿಲ್ಲಾ ರಂಗ ಮಂದಿರ, ಮಹಿಳಾ ಸಮಾಜ ಹಾಗೂ ವಿಶ್ವವಿದ್ಯಾಲಯದ ಬಸವೇಶ್ವರ ಸಭಾಂಗಣದಲ್ಲಿ ಉತ್ತಮ ಕಾರ್ಯಕ್ರಮಗಳನ್ನು ಆಯೋಜಿಸಿದ್ದ ಪ್ರೇಕ್ಷಕರ ಕೊರತೆ ಕಂಡು ಬಂದಿತು.

ಕೃಷಿ ಮೇಳ, ಆಹಾರ ಮೇಳದಲ್ಲಿ ಭಾರಿ ಸಂಖ್ಯೆಯಲ್ಲಿ ಜನ ಬಂದಿದ್ದರು. ಸಂಜೆ ವೇಳೆಗೆ ಅಪಾರ ಸಂಖ್ಯೆಯಲ್ಲಿ ಜನ ಹರಿದು ಬಂದರು. ಜನರನ್ನು ನಿಯಂತ್ರಿಸುವುದು ಕಷ್ಟವಾಯಿತು. ರಾಯಚೂರು ಉತ್ಸವದ ಪ್ರಧಾನ ವೇದಿಕೆಗೆ ಬರಲು ನಾಲ್ಕು ಕಡೆ ಪ್ರವೇಶ ದ್ವಾರಗಳನ್ನು ನಿರ್ಮಿಸಲಾಗಿತ್ತು. ಮುಖ್ಯ ದ್ವಾರದಲ್ಲಿ ಸಾರ್ವಜನಿಕರು ಸುಲಭವಾಗಿ ಬಂದು ಹೋಗಲು ವ್ಯವಸ್ಥೆ ಮಾಡಲಾಗಿತ್ತು. ಗಣ್ಯರು, ಕಲಾವಿದರು, ಪತ್ರಕರ್ತರಿಗೆ ಪ್ರತ್ಯೇಕ ಮಾರ್ಗದ ವ್ಯವಸ್ಥೆ ಮಾಡಲಾಗಿತ್ತು. ವಾಹನಗಳ ನಿಲುಗಡೆಗೂ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿ–ತ್ತು. ರಸ್ತೆ ಬದಿಗೆ ನಿಲ್ಲಿಸಿದ ದ್ವಿಚಕ್ರವಾಹನಗಳನ್ನು ಸಂಚಾರ ಠಾಣೆಯ ಪೊಲೀಸರು ಟೋಯ್

## ನೇಮಕಾತಿ ಪ್ರಕಟಣೆ

KMF SHIMUL ನೇಮಕಾತಿ 2025–26 194 ಸಹಾಯಕ ವ್ಯವಸ್ಥಾಪಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ KMF SHIMUL ನೇಮಕಾತಿ 2025–26: 194 ಸಹಾಯಕ ವ್ಯವಸ್ಥಾಪಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ. ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಲಿಮಿಟೆಡ್ (KMF SHIMUL) ನವೆಂಬರ್ 2025 ರ KMF ಶಿಮುಲ್ ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ವ್ಯವಸ್ಥಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಈ KMF SHIMUL ಸಹಾಯಕ ವ್ಯವಸ್ಥಾಪಕ ಹುದ್ದೆಗಳಿಗೆ 14–ಡಿಸೆಂಬರ್–2025 ರ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ (21–02–2026 ರವರೆಗೆ ವಿಸ್ತರಿಸಲಾಗಿದೆ) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 06–02–2026 ಅಧಿಕೃತ ವೆಬ್‌ಸೈಟ್: shimul.coop ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 14–ಡಿಸೆಂಬರ್–2025 (21–02–2026 ರವರೆಗೆ ವಿಸ್ತರಿಸಲಾಗಿದೆ)

## ಆಟದ ಜೊತೆಗೆ ಪಾಠದಲ್ಲೂ ಗಮನಹರಿಸಿದರೆ ಭವಿಷ್ಯ ಉಜ್ವಲ.ಎಮ್,ಡಿ,ಆಲಮ್

ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಆಟದ ಜೊತೆಗೆ ಪಾಠದಕಡೆಗೂ ಗಮನಹರಿಸಿದರೆ ಉನ್ನತಸ್ಥಾನ ಪಡೆದು ಜೀವನ ಉಜ್ವಲ ವಾಗುತ್ತದೆಂದು ಮನೆಪಾಠಶಾಲೆಯ ಶಿಕ್ಷಕರಾದ ಎಮ್,ಡಿ,ಆಲಮ್ ಭಾಷಾ ಹಣಿಗಿ ಕಿವಿಮಾತುಗಳನ್ನು ಹೇಳಿದರು.**

ತುಮಕೂರಿನಲ್ಲಿ ಜನವರಿ 31 ನೇ ತಾರೀಕಿನಿಂದ ಫೆಬ್ರುವರಿ 3 ನೇ ತಾ–ರೀಕಿನ ತನಕ ನಡೆದ ರಾಷ್ಟ್ರಮಟ್ಟದ ಖೋ ಖೋ ಪಂದ್ಯಾವಳಿಯಲ್ಲಿ ಕರ್ನಾಟಕ ರಾಜ್ಯ ಅಮೇಚೂರ್ ಖೋ ಖೋ ಅಸೋಸಿಯೇಷನ್ ವತಿಯಿಂದ ಕರ್ನಾಟಕದ ಖೋ ಖೋ ತಂಡದಲ್ಲಿ ಸ್ಥಾನಪಡೆದಿದ್ದ ಬಳಗಾನೂ–ರಿನ ಕ್ರೀಡಾಪಟು ಮೌನೇಶ ತಂದೆ ನಾಗಪ್ಪ ನಾಯಕ ರಾಷ್ಟ್ರಮಟ್ಟದ ಖೋ ಖೋ ಆಟದಲ್ಲಿ ಉತ್ತಮ ಪ್ರದರ್ಶನ ತೋರಿ ಕರ್ನಾಟಕ ತಂಡ ತಮಿಳು ನಾಡು ತಂಡವನ್ನು ಮಣಿಸಿ ಪ್ರಥ–




'ಮ ಸ್ಥಾನ ಪಡೆಯಲು ಕಾರಣವಾಗಿದ್ದಾನೆ. ಅದರ ಪ್ರಯುಕ್ತ ಗುರುವಾರ ಸಂಜೆ ಬಳಗಾನೂರಿನ ಎಮ್,ಡಿ,ಆಲಮ್ ಭಾಷಾ ಮನೆಪಾಠಶಾಲೆಯ ವತಿಯಿಂದ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಶ್ರೀಮತಿ ಇರ್ಫಾನ್ ಬೇಗಂ ಮತ್ತು ಎಮ್,ಡಿ,ಆಲಮ್ ಭಾಷಾ ಹಣಿಗಿ ದಂಪತಿಗಳು ಸನ್ಮಾನ ಮಾಡಿ ಮಾತನಾಡಿದರು. ದೈಹಿಕ ಶಿಕ್ಷಣ ಶಿಕ್ಷಕ ಬಸವರಾಜ ಯಾದಗಿರಿ ಮಾತನಾಡಿ ಮೌನೇಶ ನಮ್ಮ ಶಾಲೆಯಲ್ಲಿ ಆರನೆ ತರಗತಿಗೆ ಸೇರಿದಾಗಿನಿಂದ ಪಿ,ಯು,ಸಿ ಯವರೆಗೆ ಆಟ,ಪಾಟಗಳಲ್ಲಿ ಚುರುಕಿನಿಂದ ಭಾಗವಹಿಸುತ್ತಿದ್ದ. ಯಾವುದೇ ದುಷ್ಚಟಗಳಿಲ್ಲದೆ ದೈಹಿಕ ಕಸರತ್ತು ನಡೆಸಿ ನಮ್ಮ ನಿರ್ದೇಶನಗಳನ್ನು ಸರಿಯಾಗಿ ಗ್ರಹಿಸಿ ಅನುಸರಿಸಿ ಈಗ ರಾಷ್ಟ್ರಮಟ್ಟದಲ್ಲಿ ಮಿಂಚುತ್ತಿರುವುದು ನಮ್ಮ ಊರಿಗೆ,ಪಾಲಕರಿಗೆ,ಶಾಲೆಗೆ ಹೆಮ್ಮೆಯ ವಿಷಯವೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ ಮಾಧ್ಯಮಕ್ಕೆ ಪ್ರತಿಕ್ರಿಯಿಸಿದ ಕ್ರೀಡಾಪಟು ಮೌನೇಶ ನಾಯಕ ತನ್ನ ಕ್ರೀಡಾ ಪಯಣದ ಅನುಭವಗಳನ್ನು ಹಂಚಿಕೊಂಡನು. ಬಳಗಾನೂರು ಪಟ್ಟಣ ಪಂಚಾಯ್ತಿಯ ಹಿರಿಯ ಸದಸ್ಯ ಹನುಮೇಶ ಹೂಗಾರ್,ಪಟ್ಟಣ ಪಂಚಾಯ್ತಿಯ ಉಪಾಧ್ಯಕ್ಷ ಮಂಜುನಾಥ ಸ್ವಾಮಿ,ದೇವಪ್ಪ ಉಪ್ಪಾರ್ ,ಶಿವಶರಣ (ದೊಡ್ಡಾ) ಉಪ್ಪಾರ,ಮೌನೇಶ ನಾಯಕ,ಕಾಳಪ್ಪ ನಾಯಕ,ಅಮರೇಶ್ ಗಚ್ಚಿನಮನಿ, ಶಿವಕುಮಾರ ನಾಯಕ, ಕಾರ್ತೀಕ,ಹೈಮದ್,ವರದಿಗಾರ ಹನುಮೇಶ ಕಮ್ಮಾರ್,ಉಪನ್ಯಾಸಕ ಸುರೇಶ ಬಳಗಾನೂರು ಮೌನೇಶನಿಗೆ ಸನ್ಮಾನಿಸಿ ನಿನ್ನ ಕೀರ್ತಿ ಅಂತರಾಷ್ಟ್ರೀಯ ಮಟ್ಟಕ್ಕೂ ಆಯ್ಕೆಯಾಗಿ ಕೀರ್ತಿವಂತನಾಗು ಎಂದು ಹರಸಿದರು.

## ತಾಲೂಕು ಮಟ್ಟದ ರಸಪ್ರಶ್ನೆ ಸ್ಪರ್ಧೆ :ಡಾ.ಮಹಾಂತಗೌಡ ಪಾಟೀಲ್

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದಲ್ಲಿರುವ ದೇವಾನಾಂ ಪ್ರಿಯ ಅಶೋಕ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ತಾಲೂಕು ಮಟ್ಟದ ರಸಪ್ರಶ್ನೆ ಸ್ಪರ್ಧೆಯನ್ನು ಇದೇ ತಿಂಗಳ ಫೆಬ್ರವರಿ 10 ರಂದು ನಮ್ಮ ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಮಹಾಂತಗೌಡ ಪಾಟೀಲ್ ತಿಳಿಸಿದರು.**




ಈ ರಸಪ್ರಶ್ನೆ ಸ್ಪರ್ಧೆಯು ಮಸ್ಕಿ ತಾಲೂಕಿನ ಎಲ್ಲಾ ದ್ವಿತೀಯ ವರ್ಷದ ಪಿಯುಸಿ ವಿದ್ಯಾರ್ಥಿಗಳಿಗೆ ಮುಕ್ತವಾಗಿದ್ದು. ಸ್ಪರ್ಧೆಯಲ್ಲಿ ದ್ವಿತೀಯ ವರ್ಷದ ಪಿಯುಸಿ ಪಠ್ಯಕ್ರಮಕ್ಕೆ ಸಂಬಂಧಿಸಿದ ಪ್ರಶ್ನೆಗಳು ಕೇಳಲಾಗುತ್ತವೆ. ಆರಂಭಿಕ ಹಂತದಲ್ಲಿ ಪ್ರತಿ ಕಾಲೇಜಿನಿಂದ ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳಿಗೆ ಲಿಖಿತ ಪರೀಕ್ಷೆಯ ಮೂಲಕ ಸ್ಪರ್ಧೆಯನ್ನು ಆಯೋಜಿಸಲಾಗುವುದು. ಹೆಚ್ಚು ಅಂಕ ಗಳಿಸಿದ ತಂಡಗಳಿಗೆ ನಗದು ಬಹುಮಾನಗಳನ್ನು ಪ್ರಧಾನ ಮಾಡಲಾಗುವುದು. ತಾಲೂಕಿನ ಎಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು ತಮ್ಮ ವಿದ್ಯಾರ್ಥಿಗಳನ್ನು ಈ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಲು ಮನವಿ ಮಾಡಿದರು.

## ಮುದ್ದೇಬಿಹಾಳದ ಮಹಿಳಾ ಪೊಲೀಸ್ ಪೇದೆಗೆ 'ವರ್ಷದ ಸೂಪರ್ ಕಾಫ್' ಪ್ರಶಸ್ತಿ



ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ಸೆಲ್ಯೂಟ್ ಇಂಟರ್‌ನ್ಯಾಶನಲ್ ಸಂಸ್ಥೆ, ವಿಜಯಪುರ ವತಿಯಿಂದ ನೀಡಲಾಗುವ 2025ನೇ ಸಾಲಿನ 'ವರ್ಷದ ಸೂಪರ್ ಕಾಫ್' ಪ್ರಶಸ್ತಿಗೆ ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಪೊಲೀಸ್ ಮುಖ್ಯ ಪೇದೆ ಶ್ರೀಮತಿ ಎಸ್. ಆರ್. ಕೊಣ್ಣೂರ ಅವರು ಭಾಜನರಾಗಿದ್ದಾರೆ.**

ಪೊಲೀಸ್ ಇಲಾಖೆಯಲ್ಲಿ ಅವರು ಸಲ್ಲಿಸಿರುವ ಕರ್ತವ್ಯನಿಷ್ಠ, ಪ್ರಾಮಾಣಿಕ ಹಾಗೂ ಜನಸೇವಾಮುಖಿ ಕಾರ್ಯವನ್ನು ಗುರುತಿಸಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ. ಪ್ರಶಸ್ತಿ ಸ್ವೀಕರಿಸಿದ ಹಿನ್ನೆಲೆಯಲ್ಲಿ ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಶ್ರೀಮತಿ ಎಸ್. ಆರ್. ಕೊಣ್ಣೂರ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ ಮಹಮ್ಮದ್ ಪಸಿಯುದ್ದಿನ್, ಪೊಲೀಸ್ ಇಲಾಖೆಯಲ್ಲಿ ಪ್ರಾಮಾಣಿಕತೆ ಮತ್ತು ಕರ್ತವ್ಯಪರತೆ ಅತ್ಯಂತ ಮುಖ್ಯವಾಗಿದ್ದು, ಕೊಣ್ಣೂರ ಅವರು ತಮ್ಮ ಸೇವೆಯ ಮೂಲಕ ಇಲಾಖೆಗೆ ಹೆಮ್ಮೆ ತಂದಿದ್ದಾರೆ ಎಂದು ಹೇಳಿದರು.

ನಂತರ ಮಾತನಾಡಿದ ಪಿಎಸ್‌ಐ ಸಂಜಯ ತಿಪ್ಪಾರಡ್ಡಿ, ಮಹಿಳಾ ಪೊಲೀಸ್ ಸಿಬ್ಬಂದಿ ಸಮಾಜದಲ್ಲಿ ಭದ್ರತೆ ಹಾಗೂ ವಿಶ್ವಾಸ ನಿರ್ಮಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಶ್ರೀಮತಿ ಕೊಣ್ಣೂರ ಅವರಿಗೆ ದೊರೆತಿರುವ ಈ ಪ್ರಶಸ್ತಿ ಇತರ ಸಿಬ್ಬಂದಿಗೂ ಪ್ರೇರಣೆಯಾಗಲಿದೆ ಎಂದು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಪೊಲೀಸ್ ಠಾಣೆಯ ಅನೇಕ ಸಿಬ್ಬಂದಿಗಳು ಉಪಸ್ಥಿತ–ರಿದ್ದು, ಪ್ರಶಸ್ತಿ ಪುರಸ್ಕೃತ ಶ್ರೀಮತಿ ಎಸ್. ಆರ್. ಕೊಣ್ಣೂರ ಅವರಿಗೆ ಅಭಿನಂದನೆ ಸಲ್ಲಿಸಿದರು. ಕಾರ್ಯಕ್ರಮವು ಸರಳ ಹಾಗೂ ಗೌರವಪೂರ್ಣ ವಾತಾವರಣದಲ್ಲಿ ನಡೆಯಿತು.

# ನಾಲ್ಕು ಜನ ಲೇಖಕರಿಗೆ ದತ್ತಿ ಪ್ರಶಸ್ತಿ

ನೈಜ್ಯ ದೆಸೆ ನ್ಯೂಸ್

**ಕೊಪ್ಪಳ: ಕನ್ನಡ ಸಾಹಿತ್ಯ ಪರಿಷತ್ತು ಕೊಪ್ಪಳ ತಾಲ್ಲೂಕು ಘಟಕವು ದಿ. ಮರಿಗೌಡ ಮಲ್ಲನಗೌಡರ ಅವರ ಹೆಸರಿನಲ್ಲಿ ಸಾಹಿತಿ ಮಹಾಂತೇಶ ಮಲ್ಲನಗೌಡರ ಅವರು ನೀಡುವ ಜಿಲ್ಲಾ ಲೇಖಕರ ಬರಹಗಳಿಗೆ ಪ್ರಶಸ್ತಿ ಪ್ರಕಟಿಸಲಾಗಿದೆ.**

ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸಹಾಯಕ ಆಡಳಿತಾಧಿಕಾ–ರಿಯಾಗಿ ಬಳ್ಳಾರಿಯಲ್ಲಿ ಕೆಲಸ ಮಾಡುತ್ತಿರುವ ಕೊಪ್ಪಳದ ಪಿ.ಎಸ್.



ಅಮರದೀಪ್ ಅವರ ಮರಳಿಮನ ಸಾಗಿದೆ ಕೃತಿ, ಕೊಪ್ಪಳದ ಸಾಹಿತಿ ಶಿವನಗೌಡ ಪೊಲೀಸ್ ಪಾಟೀಲ್ ಅವರ ಛಲಬಿಡದ ಸಾಧಕಿಂ–ಮರು ಸಂಕಲನ ಪ್ರಶಸ್ತಿ ಬಾಚಿಕೊಂಡಿವೆ. ಜಿಲ್ಲೆಯ ಬರಹಗಾರ್ತಿಯರಿಗೆ ಅಂದಮ್ಮ ಮ–ರಿಗೌಡ ಮಲ್ಲನಗೌಡರ ಅವರ ಹೆಸರಿನಲ್ಲಿ ನೀಡುವ ದತ್ತಿ ಪ್ರಶಸ್ತಿಗೆ ಲೇಖಕಿ ಹಾಗೂ ಶಿಕ್ಷಕಿ ಗಂಗಾವತಿಯ ಜಯಶ್ರೀ ಹಕ್ಕಂಡಿ ಅವರ ಉಳಿದಷ್ಟೇ ದನಿ ಕವಿತೆಗಳ ಸಂಕಲನ ಮತ್ತು ಶಿಕ್ಷಕಿ ಕುಕನೂರಿನ ಗೀತಾ ಎನ್. ಮಲ್ಲನಗೌಡ ಅವರ ವಚನಸಿರಿ ಆಧುನಿಕ ವಚನಗಳ ಸಂಕಲನಗಳು ಆಯ್ಕೆಯಾಗಿವೆ. 'ಪ್ರತಿ ಸಲ ಒಬ್ಬರನ್ನೇ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತಿತ್ತು. ಆದರೆ ಈ ಬಾರಿ ಎರಡೂ ಪ್ರಶಸ್ತಿಗಳಿಗೆ ತಲಾ ಇಬ್ಬರು ಆಯ್ಕೆಯಾಗಿರುವುದು ವಿಶೇಷ' ಎಂದು ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ರಾಮಚಂದ್ರಗೌಡ ಗೊಂಡಬಾಳ ತಿಳಿಸಿದ್ದಾರೆ.

## ಶ್ರೀರಾಮ ದೇವಸ್ಥಾನ ಅಭಿವೃದ್ಧಿ :ಭೂಮಿ ಪೂಜೆ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ 8ರ ಶ್ರೀರಾಮ ದೇವಸ್ಥಾನದ ಅಭಿವೃದ್ಧಿ ಹಾಗೂ ಅಂಗನವಾಡಿ ಕೇಂದ್ರ 2, 3ರ ನಿರ್ಮಾಣ ಕಾಮಗಾರಿಗಳಿಗಾಗಿ ಶಾಸಕ ನಾರಾ ಭರತ್ ರೆಡ್ಡಿಯವರು ಭೂಮಿ ಪೂಜೆ ನೆರವೇರಿಸಿದರು.**



ಈ ಸಂದರ್ಭ ಪಾಲಿಕೆಯ ಸದಸ್ಯ ರಾಮಾಂಜನೇಯಲು, ಕಾಂಗ್ರೆಸ್ ಮುಖಂಡರಾದ ಡಿ.ಸೂರಿ, ಪರಶುರಾಮುಡು, ಥಿಯೇಟರ್ ಶಿವು, ಸ್ಥಳೀಯ ಮುಖಂಡರಾದ ವೆಂಕಟೇಶಲು, ಆಂಜನೇಯಲು, ಫಕ್ಕೀರಪ್ಪ, ಜಿ.ಕೆ.ಸ್ವಾಮಿ, ಕೇಶವಲು, ಸನತಕುಮಾರ್ ಸೇರಿದಂತೆ ಹಲವರು ಹಾಜರಿದ್ದರು.

# ಫೆ.13 ರಂದು ಪಿಂಚಣಿ ಅದಾಲತ್

ನೈಜ್ಯ ದೆಸೆ ನ್ಯೂಸ್

**ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಪಿಂಚಣಿದಾರರ ಕುಂದು ಕೊರತೆ ಆಲಿಸಿ, ಪರಿಹರಿಸಲು ಫೆಬ್ರವರಿ 13 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ನಗರದ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಪ್ರಾದೇಶಿಕ ಕಚೇರಿಯ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ ಕೆ.ವಿ ಪ್ರವೀಣ್ ಅವರು ತಿಳಿಸಿದ್ದಾರೆ.**




ಬಳ್ಳಾರಿ, ವಿಜಯನಗರ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾ–ರಿಗೆ ಪತ್ರ ಅಥವಾ ಇ–ಮೇಲ್ ಮೂಲಕ ಪಿ.ಪಿ.ಓ ಸಂಖ್ಯೆ, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ ಮತ್ತು ಕುಂದು ಕೊರತೆಯ ಸ್ವರೂಪ ಹಾಗೂ ಇತ್ಯಾದಿಗಳನ್ನು ಅಂಚೆ ಪತ್ರದ ಮೂಲಕ ಫೆಬ್ರವರಿ 10 ರೊಳಗಾಗಿ ತಿಳಿಸಬಹುದು. ಪತ್ರ ಲಕೋಟೆ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08392–268943 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.13 ರಂದು ಸಾರಿಗೆ ಅದಾಲತ್ ಬಳ್ಳಾರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ವತಿಯಿಂದ ಸಾರಿಗೆ ಸಂಬಂಧಿಸಿದಂತೆ ಸಾರ್ವಜನಿಕರ ದೂರು, ಕುಂದು–ಕೊರತೆಗಳನ್ನು ಆಲಿಸಿ ಪರಿಹರಿಸಲು ಫೆ.13 ರಂದು ಮಧ್ಯಾಹ್ನ 03 ಗಂಟೆಗೆ ನಗರದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಸಾರಿಗೆ ಅದಾಲತ್ ಹಮ್ಮಿಕೊಳ್ಳಲಾಗಿದೆ. ಅದಾಲತ್ ನಲ್ಲಿ ಸಾರ್ವಜನಿಕರ ಕುಂದು–ಕೊರತೆಗಳನ್ನು ಅರ್ಜಿ ಮೂಲಕ ಸ್ವೀಕರಿಸಿ ಇತ್ಯರ್ಥಗೊಳಿಸಲಾಗುವುದು. ಸಾರ್ವಜನಿಕರು ತಮ್ಮ ಬಾಕಿ ಇರುವ ಅರ್ಜಿಗಳನ್ನು ಅದಾಲತ್ ನಲ್ಲಿ ಭಾಗವಹಿಸಿ ಬಗೆಹ–ರಿಸಿಕೊಳ್ಳಬಹುದಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿರುದ್ಯೋಗ ನಿವಾರಣೆ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಉದ್ಯೋಗ ಮೇಳ ಆಯೋಜನೆ: ಎನ್.ಎಸ್. ಭೋಸರಾಜು

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸರ್ಕಾರವು ಉದ್ಯೋಗ ಮೇಳಗಳನ್ನು ರಾಜ್ಯದಲ್ಲಿ ಹೆಚ್ಚು ಹೆಚ್ಚು ಆಯೋಜಿಸುವ ಮೂಲಕ ನಿರುದ್ಯೋಗ ನಿವಾರಣೆಗಾಗಿ ಶ್ರಮಿಸುತ್ತಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಚಿವ ಎನ್.ಎಸ್. ಭೋಸರಾಜು ಅವರು ಹೇಳಿದರು.ಎಡೆದೊರೆ ನಾಡು ರಾಯಚೂರು ಉತ್ಸವದ ಅಂಗವಾಗಿ ರಾಯಚೂರಿನ ಕೃಷಿ ವಿ.ವಿ. ಆವರಣದಲ್ಲಿ ಉತ್ಸವದ ಎರಡನೆ ದಿನವಾದ ಶುಕ್ರವಾರ ಕೌಶಲ್ಯಾಭಿವೃದ್ಧಿ ಇಲಾಖೆ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಕೌಶಲ್ಯ ಮಿಷನ್ ಇವರ ಸಂಂ–ಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಉದ್ಯೋಗ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.**

ನಿರುದ್ಯೋಗಿಗಳು ತಮ್ಮ ಭವ್ಯ ಭವಿಷ್ಯ ಕಂಡುಕೊಳ್ಳಲು ನೆರವಾಗುವ ನಿಟ್ಟಿನಲ್ಲಿ, ಯುವನಿಧಿ ಗ್ಯಾರಂಟಿ ಯೋಜನೆಯನ್ನು ಜಾರಿಗೊಳಿಸಿ, ಅವ–ರಿಗೆ ನಿರುದ್ಯೋಗ ಭತ್ಯೆ ನೀಡುತ್ತಿದ್ದೇವೆ. ಇದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಉದ್ಯೋಗ ಮೇಳಗಳನ್ನು ಹೆಚ್ಚು ಹೆಚ್ಚು ಆಯೋಜಿಸುವ ಮೂಲಕ ಯುವಶಕ್ತಿಗೆ ಆಸರೆಯಾಗುತ್ತಿದೆ. 2023ರ



ಚುನಾವಣೆ ಪೂರ್ವದಲ್ಲಿ ನೀಡಿದ ಭರವಸೆಯಂತೆ ಐದು ಗ್ಯಾರಂಟಿ ಯೋಜನೆಗಳ ಜೊತೆಗೆ 'ಯುವನಿಧಿ' ಯೋಜನೆಯನ್ನು ಜಾರಿಗೆ ತರಲಾಗಿದೆ. ಇಂತಹ ಉದ್ಯೋಗ ಮೇಳದ ಅವಕಾಶಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಚಿವ ಎನ್.ಎಸ್. ಭೋಸರಾಜು ಹೇಳಿದರು. ಸಂಸದ ಜಿ. ಕುಮಾರನಾಯಕ್ ಅವರು ಮಾತನಾಡಿ, ಜಗತ್ತಿನಲ್ಲಿಯೇ ನಮ್ಮ ದೇಶದಲ್ಲಿ ಯುವ ಮಾನವ ಸಂಪನ್ಮೂಲ ಹೆಚ್ಚಿದೆ. ಯುವ ಜನತೆಯೇ ನಮ್ಮ ದೇಶದ ಆಸ್ತಿ. ಈ ಯುವಶಕ್ತಿಯ ಸದ್ಬಳಕೆಯನ್ನು ನಮ್ಮ ದೇಶ ಮಾಡಿಕೊಳ್ಳಬೇಕಿದೆ. ಯುವ ಜನರಿಗೆ ಹೆಚ್ಚು ಉದ್ಯೋಗ ಸೃಷ್ಟಿಯಾಗಲು, ಈ ಶಕ್ತಿಗೆ ಕೌಶಲ್ಯದ ತರಬೇತಿಯೂ ಅಗತ್ಯವಿದೆ. ಇದಕ್ಕಾಗಿ ಸರ್ಕಾರ ಹೆಚ್ಚಿನ ನೆರವು ನೀಡುತ್ತಿದೆ. ಯುವಜನತೆ ಕೌಶಲ್ಯವನ್ನು ಕಲಿತುಕೊಳ್ಳದಿದ್ದರೆ ಭವಿಷ್ಯದಲ್ಲಿ ಉತ್ತಮ ಉದ್ಯೋಗ ದೊರಕುವುದು ಕಷ್ಟಸಾಧ್ಯವಾಗುತ್ತದೆ ಎಂದರು. ಕರ್ನಾಟಕ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮಾಂತರ ಶಾಸಕ ಬಸನಗೌಡ ದದ್ದಲ್ ಮಾತನಾಡಿ, ರಾಯಚೂರು ಜಿಲ್ಲೆಯಲ್ಲಿ ಯುವ ಜನತೆಗೆ ಹೆಚ್ಚಿನ ಉದ್ಯೋಗ ಸೃಷ್ಟಿ ಮಾಡಿಕೊಡಲು ಕೆಐಎಡಿಬಿ ಅಡಿ



4000 ಎಕರೆ ಪ್ರದೇಶದಲ್ಲಿ ಟೆಕ್ಸ್ಟೈಲ್ ಪಾರ್ಕ್ ಸ್ಥಾಪಿಸಲು ಸಿದ್ಧತೆ ನಡೆದಿದೆ. ಇದರಿಂದ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ. ಜಿಲ್ಲೆಯಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪನೆಯದರೆ, ರಾಯಚೂರು ಜಿಲ್ಲೆಯ ಜನರಿಗೂ ಹೆಚ್ಚಿನ ಉದ್ಯೋಗಗಳು ಸೃಜನೆಯಾಗುತ್ತವೆ ಎಂದರು.

ಉದ್ಯೋಗ ಮೇಳದಲ್ಲಿ 63 ಕಂಪನಿಗಳು ಭಾಗಿ: ರಾಯಚೂರು ಉತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಉದ್ಯೋಗ ಮೇಳ ಹಲವಾರು ಯುವ ಜನರಿಗೆ ಬದುಕಿನ ಭದ್ರತೆ ಕಲ್ಪಿಸಿಕೊಳ್ಳಲು ವೇದಿಕೆಯಾಗಿ ಪರಿಗಣಿಸಿತು. ಮೇಳದಲ್ಲಿ ಆಟೋಮೊಬೈಲ್ ಮೆಕ್ಯಾನಿಕಲ್ ಕನ್‌ಸ್ಟ್ರಕ್ಷನ್, ಮಾರ್ಕೆಟಿಂಗ್, ಸೇಲ್ಸ್ ಅಂಡ್ ರೀಟೇಲ್ ಟೆಲಿಕಾಂ, ಬಿಪಿಒ, ಟೆಕ್ಸ್ಟೈಲ್, ಬ್ಯಾಂಕಿಂಗ್, ಫೈನಾನ್ಸ್, ಇನ್ಶೂರೆನ್ಸ್, ಹಾಸ್ಪಿಟಲ್ ಫಾರ್ಮಾಸಿಟಿ–ಕಲ್ ಹೆಲ್ತ್ ಕೇರ್, ಟ್ರಾನ್ಸ್ಪೋರ್ಟ್, ಆಹಾರ ಸಂಸ್ಕರಣೆ, ಹೋಟೆಲ್ ನಿರ್ವಹಣೆ, ಗಾರ್ಮೆಂಟ್ಸ್, ಸೆಕ್ಯೂರಿಟಿ ಸೇರಿದಂತೆ ನಾನಾ ವಿಭಾಗದ 63 ಕ್ಕೂ ಹೆಚ್ಚು ಕಂಪೆನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದವು. ಉದ್ಯೋಗ ಮೇಳಕ್ಕೆ ಹತ್ತು ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ನೊಂದಣಿ ಮಾಡಿಕೊಂಡಿದ್ದರಾದರೂ, ಶುಕ್ರವಾರ ಮಧ್ಯಾಹ್ನದ ವೇಳೆಗೆ 1200 ಕ್ಕೂ ಅಧಿಕ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಪಾಲ್ಗೊಂಡರು. ಎಸ್–ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ ವಿವಿಧ ಶೈಕ್ಷಣಿಕ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಉದ್ಯೋಗ ಮೇಳದ ಲಾಭ ಪಡೆದುಕೊಂಡರು.

ಉದ್ಯೋಗಾಕಾಂಕ್ಷಿಗಳು ತಮ್ಮ ವಿದ್ಯಾರ್ಹತೆಗೆ ಅನುಗುಣವಾಗಿರುವ ಕೆಲಸಕ್ಕೆ ಅರ್ಜಿ ಸಲ್ಲಿಸಿ ಸಂದರ್ಶನದಲ್ಲಿ ಭಾಗವಹಿಸಿ ಸ್ಥಳದಲ್ಲಿಯೇ ನೇಮಕಾತಿ ಪತ್ರ ಪಡೆದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ ಕಾಂದೂ, ಜಿ.ಪಂ. ಉಪಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ, ಮುಖ್ಯ ಯೋಜನಾಧಿಕಾರಿ ಡಾ. ಟಿ. ರೋಣಿ, ಉದ್ಯೋಗಾಧಿಕಾರಿ ನವೀನ್ ಕುಮಾರ್, ಕೌಶಲ್ಯಾಭಿವೃದ್ಧಿ ಇಲಾಖೆ ಅಧಿಕಾರಿ ಜಿ.ಯು. ಹುಡೇದ್ ಸೇರಿದಂತೆ ವಿವಿಧ ಅಧಿಕಾರಿಗಳು, ಗಣ್ಯರು ಪಾಲ್ಗೊಂಡಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

## ಎಲ್‌ಎಲ್‌ಬಿ

ಎಲ್‌ಎಲ್‌ಬಿ (Bachelor of Laws) ಎಂಬುದು ಕಾನೂನು ಕ್ಷೇತ್ರದಲ್ಲಿ ವೃತ್ತಿಜೀವನವನ್ನು ನಿರ್ಮಿಸಲು ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳಿಗೆ ಉತ್ತಮ ಪದವಿ ಕೋರ್ಸ್ ಆಗಿದೆ. ಎಲ್‌ಎಲ್‌ಬಿ ಪೂರ್ಣ ರೂಪ ಬ್ಯಾಚುಲರ್ ಆಫ್ ಲೆಜಿಸ್ಲೇಟಿವ್ ಲಾಸ್, ಇದು 3 ವರ್ಷಗಳ ಪದವಿಪೂರ್ವ ಕಾನೂನು ಪದವಿ ಕಾರ್ಯಕ್ರಮವಾಗಿದೆ. ಕಾನೂನು ಕ್ಷೇತ್ರಕ್ಕೆ ಆಕರ್ಷಿತರಾದ ಅಭ್ಯರ್ಥಿಗಳಿಗೆ ಇದು ಮೊದಲ ವೃತ್ತಿಪರ ಅರ್ಹತೆಯಾಗಿ ಕಾರ್ಯನಿರ್ವಹಿಸುತ್ತದೆ. ಇದು ಭಾರತದಲ್ಲಿ ಪ್ರಾಥಮಿಕ ಕಾನೂನು ಪದವಿಯಾಗಿದೆ. ಇದು ಕಾನೂನು ತತ್ವಗಳ ಜ್ಞಾನ, ಸಂಶೋಧನಾ ಕೌಶಲ್ಯ ಮತ್ತು ವಕೀಲರ ಜವಾಬ್ದಾರಿಗಳ ಸಂಪೂರ್ಣ ತಿಳುವಳಿಕೆಯನ್ನು ಒದಗಿಸುತ್ತದೆ. ವಿವಿಧ ಎಲ್‌ಎಲ್‌ಬಿ ವಿಶೇಷತೆಗಳೆಂದರೆ ಕಾಂಟ್ರಾಕ್ಟ್ ಲಾ, ಸಿವಿಲ್ ಲಾ, ಕೌಟುಂಬಿಕ ಲಾ, ಕ್ರಿಮಿನಲ್ ಲಾ , ಕಾರ್ಪೊರೇಟ್ ಲಾ ಇತ್ಯಾದಿ. ಇದು ಮುಖ್ಯವಾಗಿ 3 ವರ್ಷಗಳ (ಪದವಿ ನಂತರ) ಅಥವಾ 5 ವರ್ಷಗಳ (PUC ನಂತರ) ಇಂಟಿಗ್ರೇಟೆಡ್ ಕೋರ್ಸ್‌ಗಳಾಗಿ ಲಭ್ಯವಿದೆ. ಭಾರತದಲ್ಲಿ ಕಾನೂನು ಅಭ್ಯಾಸ ಮಾಡಲು ಈ ಪದವಿ ಕಡ್ಡಾಯವಾಗಿದೆ. LLB ಕೋರ್ಸ್ ವಿವರಗಳು (Kannada): ವಿಧಗಳು: 3-ವರ್ಷದ ಐಐಃ: ಯಾವುದೇ ವಿಷಯದಲ್ಲಿ ಪದವಿ (Degree) ಮುಗಿಸಿದವರು ಸೇರಬಹುದು. 5-ವರ್ಷದ ಇಂಟಿಗ್ರೇಟೆಡ್ LLB (BA LLB, BCom LLB, BBA LLB): PUC/12ನೇ ತರಗತಿ ಮುಗಿಸಿದವರು ಸೇರಬಹುದು. ಅರ್ಹತೆ : 3 ವರ್ಷದ ಕೋರ್ಸ್‌ಗೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿಯಲ್ಲಿ ಕನಿಷ್ಠ 45%-50% ಅಂಕಗಳು (SC/ST ವರ್ಗಕ್ಕೆ 5% ಸಡಿಲಿಕೆ ಇರಬಹುದು). 5 ವರ್ಷದ ಕೋರ್ಸ್‌ಗೆ: 12ನೇ ತರಗತಿಯಲ್ಲಿ ಕನಿಷ್ಠ 45%-50% ಅಂಕಗಳು. ಪ್ರವೇಶ ಪರೀಕ್ಷೆಗಳು: CLAT, AILET, LSAT, MH CET Law, KSLU Law School admission (ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ). ಪಠ್ಯಕ್ರಮ: ಸಾಂವಿಧಾನಿಕ ಕಾನೂನು, ಕ್ರಿಮಿನಲ್ ಕಾನೂನು, ಸಿವಿಲ್ ಕಾನೂನು, ಕಾರ್ಪೊರೇಟ್ ಕಾನೂನು, ಇಂಟರ್ನ್‌ಶಿಪ್‌ಗಳು. ವೃತ್ತಿ ಅವಕಾಶಗಳು: ವಕೀಲ (Advocate), ಕಾನೂನು ಸಲಹೆಗಾರ, ನ್ಯಾಯಾಧೀಶ (Judiciary), ಕಾರ್ಪೊರೇಟ್ ವಕೀಲ, ಕಾನೂನು ಅಧಿಕಾರಿ.

## ನೀರಮಾನ್ವಿ ಶ್ರೀ ರೇಣುಕ ಯಲ್ಲಮ್ಮ ದೇವಿ ವೈಭವದ ಜಾತ್ರ ಮಹೋತ್ಸವ

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ತಾಲೂಕಿನ ನೀರಮಾನ್ವಿ ಗ್ರಾಮದ ಶ್ರೀ ರೇಣುಕ ಯಲ್ಲಮ್ಮ ದೇವಿ ದೇವಸ್ಥಾನದಲ್ಲಿ ಜಾತ್ರ ಮಹೋತ್ಸವ ಅಂಗವಾಗಿ ವಿಶೇಷ ಪೂಜೆ ನಡೆಯಿತು ಬೆಳಿಗಿನಿಂದ ಜಿಲ್ಲೆ ಸೇರಿದಂತೆ ವಿವಿಧ ರಾಜ್ಯಗಳ ಸಾವಿರಾರು ಭಕ್ತರು ಆಗಮಿಸಿ ಶ್ರೀ ರೇಣುಕ ಯಲ್ಲಮ್ಮ ದೇವಿಗೆ ಪೂಜೆ ಸಲ್ಲಿಸಿದರು.**



ಸುತ್ತಮುತ್ತಲಿನ ಗ್ರಾಮದ ಭಕ್ತರು ತಮ್ಮ ಹರಕೆಯನ್ನು ತಿರಿಸಿ ಪೂಜೆ ಸಲ್ಲಿಸಿದರು. ಸಂಜೆ ದೇವಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಗುಡಿಯ ಸುತ್ತ ಪ್ರದಕ್ಷಣೆ ಹಾಕಿ ರಥದಲ್ಲಿ ಕೂಡಿಸಿ ಸಾವಿರಾರು ಭಕ್ತರ ಸಮುಖದಲ್ಲಿ ಶ್ರೀ ರೇಣುಕ ಯಲ್ಲಮ್ಮ ದೇವಿಯ ರಥೋತ್ಸವ ನೆರವೇರಿತು. ದೇವಸ್ಥಾನದ ಆಡಳಿತಾಧಿಕಾರಿ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ. ಸೇರಿದಂತೆ ಮಾಜಿ ಶಾಸಕರು ಹಾಗೂ ಗ್ರಾಮದ ಮುಖಂಡರು, ಭಾಗವಹಿಸಿದರು.

# ಆರೋಗ್ಯ ತಪಾಸಣೆ ಭರವಸೆ: ಡಾ. ರಾಮ್ ಎಲ್. ಅರಸಿದ್ಧಿ

**ನೈಜ್ಯ ದೆಸೆ ನ್ಯೂಸ್**

**ಯಲಬುರ್ಗಾ ಹಾಗೂ ಕುಷ್ಟಗಿ ತಾಲ್ಲೂಕುಗಳಲ್ಲಿ ತಲಾ ಒಂದು ಗ್ರಾಮದ ಜನರಲ್ಲಿರುವ ಆರೋಗ್ಯಕ್ಕೂ, ಕಾರ್ಖಾನೆಗಳ ಸಮೀಪದ ಗ್ರಾಮದ ಜನರ ಆರೋಗ್ಯಕ್ಕೂ ತೀವ್ರತೆರನಾದ ವ್ಯತ್ಯಾಸಗಳಿವೆಯೇ ಎನ್ನುವುದನ್ನು ಕಂಡುಕೊಳ್ಳಲು ಜನರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುವುದು' ಎಂದು ಹೇಳಿದರು.**

ಜಿಲ್ಲಾ ಬಚಾವೊ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ನಡೆಸುತ್ತಿರುವ ಹೋರಾಟ ಸ್ಥಳಕ್ಕೆ ಗುರುವಾರ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ, ಜಿಲ್ಲಾ ಪಂಚಾಯಿತಿ ಸಿಇಒ ವರ್ಣಿತ್ ನೇಗಿ ಅವರು ಭೇಟಿ ನೀಡಿದರು. ಹೋರಾಟಗಾರರ ಬೇಡಿಕೆಗಳಿಗೆ ಪೂರಕವಾಗಿ ಜಿಲ್ಲಾಡಳಿತ ಏನು ಕ್ರಮಗಳನ್ನು ಕೈಗೊಂಡಿದೆ ಎಂದು ಮನವರಿಕೆ ಮಾಡಿಕೊಟ್ಟರು. ಈ ವೇಳೆ ಧರಣಿ ನಿರತರು 'ಕಾರ್ಖಾನೆಗಳ ಮಾಲೀಕರು ನಮ್ಮ ಜಿಲ್ಲೆಯವರಲ್ಲ, ಅವರಿಗೆ ಇಲ್ಲಿಯ ಜನರ ಕಾಳಜಿ ಬೇಕಿಲ್ಲ. ಕಲುಷಿತ ಗಾಳಿ ಬರುತ್ತಿದೆ.

ಭವಿಷ್ಯದಲ್ಲಿ ಎದುರಾಗುವ ಸಮಸ್ಯೆಗಳಿಗೆ ಈಗಿನಿಂದಲೇ ಹೋರಾಟ ಮಾಡಲಾಗುತ್ತಿದೆ. ಅಂತರ್ಜಲಕ್ಕೆ ಕೊಳವೆ ಬಾವಿಗಳ ಮೂಲಕ ಕಲುಷಿತ ನೀರು ಕಳಿಸಲಾಗುತ್ತಿದೆ' ಎಂದು ಹೇಳಿದರು.




100ನೇ ದಿನದ ಹೋರಾಟ: ಫೆ. 7ರಂದು ಧರಣಿಯ 100ನೇ ದಿನವಾಗಿದ್ದು, ಸಾಣೆಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯರು ಕಾರ್ಖಾನೆಗಳ ಬಾಧಿತ ಗಿಣಿಗೇರಿ, ಅಲ್ಲಾನಗರ, ಹಿರೇಬಗನಾಳ, ಹಾಲವರ್ತಿ ಜನರನ್ನು ಭೇಟಿ ಮಾಡಿ ವೇದಿಕೆ ಸ್ಥಳಕ್ಕೆ ಬರಲಿದ್ದಾರೆ. ಸ್ವಾಮೀಜಿಗಳು, ಸಾಹಿತಿಗಳು ಪಾಲ್ಗೊಳ್ಳುವರು. ಹೋರಾಟ ವೇದಿಕೆಯ ಚಂದ್ರಶೇಖರ ಕವಲೂರು, ಎಂ.ಎಂ.ಮದರಿ, ಮಂಜುನಾಥ ಗೊಂಡಬಾಳ, ಮಲ್ಲಿಕಾರ್ಜುನ ಬಿ.ಗೋನಾಳ, ಶಿವಕುಮಾರ ಕುಕನೂರು, ಮಂಜುನಾಥ ಜಿ ಗೊಂಡಬಾಳ, ರಮೇಶ ತುಪ್ಪದ, ಶರಣು ಗಡ್ಡಿ, ಶರಣು ಶೆಟ್ಟರ್, ಕಾಶಪ್ಪ ಚಲವಾದಿ, ಬಿ.ಜಿ.ಕರಿಗಾರ, ಸಿ.ಬಿ.ಪಾಟೀಲ್, ಜಿ.ಬಿ.ಪಾಟೀಲ್, ಗಂಗಾಧರ ಖಾನಾಪೂರ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಕಾರ್ಖಾನೆಗಳ ವಿಸ್ತರಣೆ ವಿರೋಧಿ ಹೋರಾಟಕ್ಕೆ ನಾಳೆಗೆ 100 ದಿನ ವಿವಿಧ ಬೇಡಿಕೆಗಳನ್ನು ಸಲ್ಲಿಸಿದ ಧರಣಿ ನಿರತರು ಬಾಧಿತ ಗ್ರಾಮಗಳಿಗೆ ಭೇಟಿ ನೀಡಲಿರುವ ಸ್ವಾಮೀಜಿ ಅಲ್ಲಮಪ್ರಭು ಬೆಟ್ಟದೂರು ವೇದಿಕೆಯ ಪ್ರಧಾನ ಸಂಚಾಲಕಮುಖ್ಯಮಂತ್ರಿಗೆ ಸಲಹೆ ಕೊಡುವವರು ಅವರ ಆಪ್ತ ಶಾಸಕರು ಜಿಲ್ಲೆಯಲ್ಲಿದ್ದಾರೆ. ಎಲ್ಲರೂ ಸೇರಿ ಮಾತನಾಡಬೇಕು. ಕೆಲವರಷ್ಟೇ ಮಾತನಾಡಿ ಹಲವರು ಸುಮ್ಮನಾದರೆ ಜೀವನ ಪೂರ್ತಿ ನೋವು ಅನುಭವಿಸಬೇಕಾಗುತ್ತದೆ.ಡಾ. ಸುರೇಶ ಇಟ್ನಾಳ ಜಿಲ್ಲಾಧಿಕಾರಿಮುಖ್ಯಮಂತ್ರಿ ಸೂಚನೆ ಬಳಿಕ ಬಲ್ಡೋಟಾ ಕಾರ್ಖಾನೆ ವಿಸ್ತರಣೆ ಕಾರ್ಯ ಸ್ಥಗಿತವಾಗಿದೆ. ಸದ್ಯಕ್ಕೆ ಅಲ್ಲಿ ಯಾವುದೇ ಚಟುವಟಿಕೆ ನಡೆಯುತ್ತಿಲ್ಲ.

ಎ.ಮುರಿಗೆಪ್ಪ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ- ಕಾರ್ಖಾನೆಗಳು ವಿಸ್ತರಣೆಯಾದರೆ ಆ ವಿಷಾನಿಲ ಬದುಕು ಹಾಳು ಮಾಡುತ್ತದೆ. ಬದುಕನ್ನು ಬಣ್ಣಗೆಡಿಸುವ ಕೆಲಸ ನಡೆಯುತ್ತಿದೆ. ನಾವು ಕಾರ್ಖಾನೆಗಳ ವಿರೋಧಿಗಳಲ್ಲ. ಆರೋಗ್ಯ ಜೀವ ತೆಗೆಯುವ ಯಾವ ಕಾರ್ಖಾನೆಗಳು ಬೇಡ. ಭೂಮಿ ಕೊಟ್ಟವರ ಹೋರಾಟ ಸ್ಥಳಕ್ಕೆ ಭೇಟಿ ಕೊಪ್ಪಳ: ಬಿಎಸ್‌ಪಿಎಲ್ ಸ್ಥಾಪಿಸಿ ಇಲ್ಲವೇ ಸರ್ಕಾರಿ ನೌಕರಿ ಕೊಡಿ ಎಂದು ಆಗ್ರಹಿಸಿ ಕಾರ್ಖಾನೆಗಾಗಿ ಭೂಮಿ ಕಳೆದುಕೊಂಡ ರೈತರು ಇಲ್ಲಿನ ತಹಸೀಲ್ದಾರ್ ಕಚೇರಿಯ ಆವರಣದಲ್ಲಿ ನಡೆಸುತ್ತಿರುವ 63ನೇ ದಿನದ ಹೋರಾಟ ಸ್ಥಳಕ್ಕೆ ಜಿಲ್ಲಾಧಿಕಾರಿ ಭೇಟಿ ನೀಡಿ ಅವರ ಬೇಡಿಕೆಗಳನ್ನು ಆಲಿಸಿದರು.

'20 ವರ್ಷಗಳ ಹಿಂದೆ ಕೆಐ-ಎಡಿಬಿ ಮೂಲಕ ರಾಜ್ಯ ಸರ್ಕಾರ ಹಾಲವರ್ತಿ ಬಸಾಪುರ ಕೊಪ್ಪಳ ಕಿಡದಾಳ ಗ್ರಾಮಗಳ ರೈತರ ಜಮೀನನ್ನು ಕಾರ್ಖಾನೆ ಸ್ಥಾಪಿಸುವ ಉದ್ದೇಶದಿಂದ ಭೂಸ್ವಾಧೀನ ಪಡಿಸಿಕೊಂಡಿದೆ. ಇದುವರೆಗೂ ಆಗಿಲ್ಲ. 1034 ಎಕರೆ ಭೂಮಿ ಕಳೆದುಕೊಂಡ 359 ರೈತರ ಸ್ಥಿತಿ ಅತಂತ್ರವಾಗಿದೆ' ಎಂದು ಹೋರಾಟ ನಿರತರು ಗಮನಕ್ಕೆ ತಂದರು. ಎಸ್.ಪಿ. ಜಿ.ಪಂ. ಸಿಇಒ ಇದ್ದರು. ರೈತ ಮುಖಂಡರಾದ ಹನುಮಂತಪ್ಪ ಕೌದಿ ಮಲ್ಲಪ್ಪ ಚುಕನಕಲ್ ರಮೇಶ್ ಕಂಬಳಿ ಹನುಮೇಶ ಹಾಲವರ್ತಿ ಮನೋಜ್ ಹಾಲವರ್ತಿ ಸ್ವಾಮಿ ಹಾಲವರ್ತಿ ಪ್ರಾಣೇಶ್ ಹಾಲವರ್ತಿ ಮಾರುತಿ ಕುರುಗಡ್ಡಿ ಯಮನೂರಪ್ಪ ಏಳ್ ಕುರಿ ಈರಣ್ಣ ಶೆಟ್ಟರ ಪೀರಸಾ ಮಲ್ಲೇಶ್ ಕುಟಗನಳ್ಳಿ ಹುಲುಗಪ್ಪ ಕಂಬಳಿ ನಾಗರಾಜ್ ಭೋವಿ ಪಾಲ್ಗೊಂಡಿದ್ದರು.

# ಹಜ್ರತ್ ಮರ್ದಾನೆ ಗೈಬ್ ಉರುಸ್ ಫೆ.6ರಿಂದ

**ನೈಜ್ಯ ದೆಸೆ ನ್ಯೂಸ್**

**ನಗರದ ಐತಿಹಾಸಿಕ ಹಾಗೂ ಭಾವೈಕ್ಯತೆಯ ಸಂಕೇತವಾಗಿರುವ ಖುದ್ವತುಲ್ ಆಸ್ಫಿಯಾ ಸರ್ಕಾರ ಸೈಯದ್ ಶಾಹ್ ಹಜ್ರತ್ ಮರ್ದಾನೆ ಗೈಬ್ ಅವರ 'ಉರುಸ್-ಎ-ಷರೀಫ್' ಕಾರ್ಯಕ್ರಮವು ಫೆ.6, 7 ರವರೆಗೆ ಅತ್ಯಂತ ಸಡಗರದಿಂದ ಜರುಗಲಿದೆ ಎಂದು ಹಜರತ್ ಮರ್ದಾನೆಗೈಬ್ ನಿರ್ವಹಣಾ ಕಮಿಟಿಯ ಎಂ. ಪಾಷಾ ಕಾಟನ್ ತಿಳಿಸಿದರು.**

ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.




ಉರುಸ್ ಅಂಗವಾಗಿ ಸಾರ್ವಜನಿಕ ಸೇವಾ ಕಾರ್ಯದಡಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ. ಗಂಧೋತ್ಸವ ಕಾರ್ಯಕ್ರಮವು ಫೆ.5ಕ್ಕೆ ಮುಗಿದಿದ್ದು, ಇಂದು ಫೆ 6 ರಂದು ಸಂಜೆ 6 ಗಂಟೆಗೆ ಭವ್ಯ ಉರುಸ್ ಹಾಗೂ ಸಾರ್ವಜನಿಕ ಸಮಾರಂಭ ಜರುಗಲಿದೆ. ಕಾರ್ಯಕ್ರಮದ ಸಾನಿಧ್ಯವನ್ನು ಗುಲಬರ್ಗಾ ಬಾರ್ಗಾಹೆ ಬಂದಾನವಾಜ್ನ ಷರೀಫ್ ಸೈಯ್ಯದ್ ಷಾ ಅಲಿ ಅಲ್ ಹುಸೇನಿ ಖೀಬ್ಲಾ ಸಜ್ಜಾದಾ ನಷೀನ್, ಕೊಪ್ಪಳ ಗವಿಮಠದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಹಾಗೂ ಅಲ್ಲಾಮಾ ಮೌಲಾನಾ ಮುಫ್ತಿ ಮಹ್ಮದ್ ನಜೀರ್ ಅಹ್ಮದ್ ಖಾದ್ರಿ ತಸ್ಕೀನಿ ವಹಿಸಲಿದ್ದಾರೆ.

ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಚಿವರಾದ ಜಮೀರ್ ಅಹ್ಮದ್ ಖಾನ್, ಶಿವರಾಜ ತಂಗಡಗಿ, ಸಂಸದ ಕೆ. ರಾಜಶೇಖರ್ ಹಿಟ್ನಾಳ ಸೇರಿದಂತೆ ಜಿಲ್ಲೆಯ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಫೆ. 7 ಕ್ಕೆ ಫಾತಹಾ ಖ್ವಾನಿ ಮತ್ತು ಧಾರ್ಮಿಕ ವಿಧಿವಿಧಾನಗಳೊಂದಿಗೆ ಸಮಾರೋಪ ಜರುಗಲಿದೆ ಎಂದು ಮಾಹಿತಿ ನೀಡಿದರು. ಮೊಹಮ್ಮದ್ ಮುನಿರುದ್ದಿನ್, ಇಕ್ಬಾಲ್ ಸಿದ್ದಿಕಿ, ಮಾನ್ವಿ ಪಾಷಾ, ಅಯೂಬ್ ಅಡ್ಡೆವಾಲೆ ಇದ್ದರು.

# ಪ್ರಾಣಿಗಳ ಮೇಲೆ ದಯೆ ಇರಲಿ: ಸಚಿವರಾದ ಎನ್.ಎಸ್.ಭೋಸರಾಜು ಸಲಹೆ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು ಶ್ವಾನಗಳು ಸೇರಿದಂತೆ ಎಲ್ಲ ಪ್ರಾಣಿಗಳ ಮೇಲೆ ದಯಾ ಭಾವ ಇರಬೇಕು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದರು.**

ಫೆ.06ರ ಶುಕ್ರವಾರ ದಂದು ನಗರದ ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ ಆವರಣದಲ್ಲಿ ರಾಯಚೂರು ಜಿಲ್ಲಾ ಉತ್ಸವದ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪಶುಪಾಲನಾ ಇಲಾಖೆ ಹಾಗೂ ಕರ್ನಾಟಕ ಪಶುವೈದ್ಯಕೀಯ ಸಂಘ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ವಾನಗಳ ಪ್ರದರ್ಶನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪ್ರಾಣಿ ಹಿಂಸೆ ವಿರುದ್ಧ ಜಾಗೃತಿ ಮೂಡಿಸುವುದು, ಶ್ವಾನಗಳ ಆರೈಕೆ, ಆಹಾರ, ಲಸಿಕೆ ಮತ್ತು ವೈದ್ಯಕೀಯ ಚಿಕಿತ್ಸೆಗಳ ಬಗ್ಗೆ ಜನರಲ್ಲಿ ಅರಿವು



ಮೂಡಿಸುವುದು ಅತ್ಯಗತ್ಯ ಎಂದು ಹೇಳಿದರು.

ಈ ವೇಳೆ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಮಾತನಾಡಿ, ರಾಯಚೂರು ಉತ್ಸವ ಅಂಗವಾಗಿ ವಿವಿಧ ತಳಿಯ ಶ್ವಾನಗಳ ಪ್ರದರ್ಶನ ಸೇರಿದಂತೆ ಹತ್ತಾರು ಕಾರ್ಯಕ್ರಮಗಳ ನೋಡುವ ಭಾಗ್ಯ ಜಿಲ್ಲೆಯ ಸಾರ್ವಜನಿಕರಿಗೆ ಸಿಕ್ಕಿದೆ. ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಿ ಉತ್ಸವದ ಯಶಸ್ವಿಗೆ ಪ್ರತಿಯೊಬ್ಬರು ಪಾತ್ರ ವಹಿಸಬೇಕು ಎಂದರು. 150 ಶ್ವಾನಗಳ ನೋಂದಣಿ: ರಾಯಚೂರು ಜಿಲ್ಲಾ ಉತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಶ್ವಾನ



ಪ್ರದರ್ಶನದಲ್ಲಿ ಜಿಲ್ಲೆಯ ವಿವಿಧ ತಾಲ್ಲೂಕಿನಿಂದ ಸುಮಾರು 150ಕ್ಕೂ ಹೆಚ್ಚು ಶ್ವಾನಗಳ ನೋಂದಣಿ ಮಾಡಲಾಗಿತ್ತು. ಪುಡಲ್, ಚೌಚೌ, ಜರ್ಮನ್ ಶೇಫರ್ಡ್, ಗೋಲ್ಡನ್ ರೆಟ್ರಿವರ್, ಸೈಬೇರಿಯನ್ ಹಸ್ಕಿ, ಪಗ್, ಪಾಮೊರಾರಿಯನ್ , ದಾಬರ್ ಮ್ಯಾನ್, ಲ್ಯಾಬ್ರಾದರ್ ರೆಟ್ರಿವರ್, ಫ್ರೆಂಚ್ ಮಾಸ್ಟಿಫ್, ಕ್ಯಾನ್ ಕಾರ್ಸೋ, ಡ್ಯಾಶ್ ಹೌಂಡ್, ಬಾಕ್ಸರ್, ಗ್ರೇಟ್ ಡೇನ್, ಪಿಟ್ ಬುಲ್ ಸೇರಿದಂತೆ ವಿವಿಧ ತಳಿಯ ಶ್ವಾನಗಳ ಪ್ರದರ್ಶನದಲ್ಲಿ ನಡೆಯಿತು.

ನಂತರ ಪ್ರದರ್ಶನದಲ್ಲಿ ಭಾಗವಹಿಸಿದ ಎಲ್ಲಾ ಶ್ವಾನಗಳಿಗೆ ಉಚಿತವಾಗಿ ರೇಬೀಸ್ ಲಸಿಕೆಯನ್ನು ಹಾಕಲಾಯಿತು.

ಇದೇ ಸಂದರ್ಭದಲ್ಲಿ ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ವಿಧಾನ ಪರಿಷತ್ ಶಾಸಕರಾದ ಬಸನಗೌಡ ಬಾದರ್ಲಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮ, ಪಶು ಸಂಗೋಪನೆ ಇಲಾಖೆಯ ಉಪ ನಿರ್ದೇಶಕರಾದ ಡಾ.ಪೋಮ್ ಸಿಂಗ್, ಮುಖ್ಯ ಪಶುವೈದ್ಯಾಧಿಕಾರಿ ಡಾ.ಬಿ.ವೈ.ವಾಲ್ಮೀಕಿ, ಡಾ.ಶ್ರೀನಿವಾಸ, ಡಾ.ಶಶಿಧರ್, ಡಾ.ಅಮರೇಗೌಡ, ಡಾ. ಬಸವರಾಜ, ಡಾ.ಆನಂದ, ಡಾ.ಪ್ರಕಾಶ, ಡಾ.ಮಂಜುನಾಥ, ಡಾ.ಶ್ರೀಧರ್, ಡಾ. ಪ್ರಹ್ಲಾದ್, ಮುಖಂಡರಾದ ರವಿ ಭೋಸರಾಜು, ಕೆ.ಶಾಂತಪ್ಪ, ಜಯಂತರಾವ್ ಪತಂಗಿ ಸೇರಿದಂತೆ ಇತರರು ಇದ್ದರು.

# ಮುದ್ದೇಬಿಹಾಳ: ಅಭಿವೃದ್ಧಿಯಲ್ಲಿ ಕುಂಠಿತ ತಾಲ್ಲೂಕು; ಹಾಲಿ ಶಾಸಕರ ವಿರುದ್ಧ ಮಾಜಿ ಶಾಸಕ ನಡಹಳ್ಳಿಯವರ ತೀವ್ರ ವಾಗ್ದಾಳಿ

**ನೈಜ್ಯ ದೆಸೆ ನ್ಯೂಸ್**

**ಮುದ್ದೇಬಿಹಾಳ: ದೇಶದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನಾಯಕತ್ವಕ್ಕೆ ಜಾಗತಿಕ ಮಟ್ಟದಲ್ಲಿ ಮನ್ನಣೆ ದೊರೆಯುತ್ತಿರುವ ಸಂದರ್ಭದಲ್ಲಿ, ಇಡೀ ಭಾರತ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿದ್ದರೂ ಮುದ್ದೇಬಿಹಾಳ ತಾಲ್ಲೂಕು ಮಾತ್ರ ಅಭಿವೃದ್ಧಿಯಿಂದ ವಂಚಿತವಾಗಿರುವುದು ಅತ್ಯಂತ ದುರಂತಕರ ಸಂಗತಿ ಎಂದು ಮಾಜಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಆಕ್ರೋಶ ವ್ಯಕ್ತಪಡಿಸಿದರು.**

ಪಟ್ಟಣದ ತಮ್ಮ ದಾಸೋಹ ಗೃಹದಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸತತವಾಗಿ ಒಂಬತ್ತು ಬಾರಿ ಬಜೆಟ್ ಮಂಡನೆ ಮಾಡಿದ ದೇಶದ ಮೊದಲ ಮಹಿಳೆಯಾಗಿದ್ದು, ಈ ಬಜೆಟ್ ದೇಶದ ಅಭಿವೃದ್ಧಿಗೆ ಪೂರಕವಾಗುವಂತಹ ಬಜೆಟ್ ಆಗಿದೆ ಎಂದು ಹೇಳಿದರು. ಉದ್ಯೋಗಿಯಾಗಬೇಡ, ಉದ್ಯಮಿಯಾಗು ಎನ್ನುವ ಮಂತ್ರವನ್ನು ಸಾರುವ ಬಜೆಟ್ ಇದಾಗಿದ್ದು, ಇದು ದೇಶಪ್ರೇಮಿಗಳಿಗೆ ಮಾತ್ರ ಅರ್ಥವಾಗುತ್ತದೆ. ಕಾಂಗ್ರೆಸ್ ನಾಯಕರಿಗೆ ಈ ಬಜೆಟ್ ಅರ್ಥವಾಗುವುದಿಲ್ಲ ಎಂದು ವಾಗ್ದಾಳಿ ನಡೆಸಿದರು.

ಹಿಂದೆ ಯುವಕರು ದುಡಿದು ಸರ್ಕಾರಿ ಅಥವಾ ಅರೆಸರ್ಕಾರಿ ಉದ್ಯೋಗ ಪಡೆಯಲು ಶಿಕ್ಷಣ ಕಲಿಯುತ್ತಿದ್ದರು. ಆದರೆ ಇಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ದೇಶಭಕ್ತಿಯ ಪರಿಣಾಮವಾಗಿ ಯುವಕರು ದೇಶಪ್ರೇಮದ ಜೊತೆಗೆ ಉದ್ಯಮದತ್ತ ಮುಖ



ಮಾಡಿದ್ದಾರೆ ಎಂದು ಹೇಳಿದರು. ಇದೇ ವೇಳೆ ತಾಲ್ಲೂಕಿನ ಸದ್ಯದ ದುಸ್ಥಿತಿ, ಮೂಲಸೌಕರ್ಯಗಳ ಕೊರತೆ ಹಾಗೂ ಹಾಲಿ ಶಾಸಕರ ಆಡಳಿತ ವೈಫಲ್ಯಗಳ ವಿರುದ್ಧ ತೀವ್ರ ಟೀಕೆ ನಡೆಸಿದರು. ನಂಜುಂಡಪ್ಪ ಹಾಗೂ ಗೋವಿಂದರಾಜ ವರದಿಗಳ ಪ್ರಕಾರ ಮುದ್ದೇಬಿಹಾಳ ತಾಲ್ಲೂಕು ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು, ಈ ವರದಿಗಳನ್ನು ಆಧಾರವಾಗಿಸಿಕೊಂಡು ಹೆಚ್ಚಿನ ಅನುದಾನ ಹಾಗೂ ವಿಶೇಷ ಅಭಿವೃದ್ಧಿ ಯೋಜನೆಗಳನ್ನು ತರಬೇಕಾಗಿತ್ತು. ಆದರೆ ಜನರ ಆಶೀರ್ವಾದದಿಂದ ಅಧಿಕಾರಕ್ಕೆ ಬಂದವರು ಕ್ಷೇತ್ರದ ಬಗ್ಗೆ ಯಾವುದೇ ಕಾಳಜಿ ವಹಿಸುತ್ತಿಲ್ಲ. ಒಂದು ಕೋಟಿ ರೂಪಾಯಿ ಅನುದಾನವೂ ಸರಿಯಾಗಿ ಬಿಡುಗಡೆ ಮಾಡಿಲ್ಲ.

ಬಿಡುಗಡೆ ಮಾಡಿದ್ದರೆ ಅದರ ದಾಖಲೆಗಳನ್ನು ಸಾರ್ವಜನಿಕರ ಮುಂದೆ ಇಡಲಿ ಎಂದು ನಡಹಳ್ಳಿಯವರು ಸವಾಲು ಹಾಕಿದರು. ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಹಾಲಿ ಶಾಸಕರಲ್ಲಿ ದೂರದೃಷ್ಟಿ ಮತ್ತು ಪ್ರಾಮಾಣಿಕ ಪ್ರಯತ್ನಗಳ ಕೊರತೆ ಸ್ಪಷ್ಟವಾಗಿ ಕಾಣಿಸುತ್ತಿದೆ ಎಂದು ಹೇಳಿದರು. ಮುದ್ದೇಬಿಹಾಳ ಕ್ಷೇತ್ರದಲ್ಲಿ ನಡೆಯುತ್ತಿರುವ ಬಹುತೇಕ ಕಾಮಗಾರಿಗಳನ್ನು ಲ್ಯಾಂಡ್ ಆರ್ಮಿಗೆ ನೀಡಿ ಲೂಟಿ ಮಾಡಲಾಗುತ್ತಿದೆ, ತಮ್ಮ ಶಾಸಕತ್ವದ ಅವಧಿಯಲ್ಲಿ ಲ್ಯಾಂಡ್ ಆರ್ಮಿಗೆ ಯಾವುದೇ ಕಾಮಗಾರಿ ನೀಡಿಲ್ಲ ಎಂದು ತಿಳಿಸಿದ ಅವರು, ಈಗ ಎಲ್ಲಾ ಕೆಲಸಗಳು ಸುರೇಶ್ ಗೌಡ ಅವರ ಆಪ್ತರ ಮೂಲಕವೇ ನಡೆಯುತ್ತಿದ್ದು, ಸಾರ್ವಜನಿಕ ಹಣ ಲೂಟಿಯಾಗುತ್ತಿದೆ, ತಮ್ಮ ಅವಧಿಯಲ್ಲಿ ಗುತ್ತಿಗೆದಾರರು ಪ್ರತಿಭಟನೆ ಮಾಡುತ್ತಿದ್ದರು.

ಆದರೆ ಈಗ ಆ ಗುತ್ತಿಗೆದಾರರು ಎಲ್ಲಿಗೆ ಮಾಯವಾದರು ಎಂದು ಪ್ರಶ್ನಿಸಿದರು. ಇದಲ್ಲದೆ ಪೊಲೀಸ್ ಠಾಣೆಗಳಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು, ಬಡ ಹಾಗೂ ಹಿಂದುಳಿದ ವರ್ಗದ ಜನರಿಗೆ ನ್ಯಾಯ ಸಿಗದಂತಾಗಿದೆ. ಆಡಳಿತ ವ್ಯವಸ್ಥೆಯ ಮೇಲಿನ ಜನರ ನಂಬಿಕೆ ದಿನೇದಿನೇ ಕುಸಿಯುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ ಅವರು ಪಟ್ಟಣದ ಒಳಚರಂಡಿ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗುತ್ತಿದೆ. ಮುಖ್ಯ ರಸ್ತೆಗಳನ್ನು ಸಿಮೆಂಟ್ ರಸ್ತೆ ಮಾಡಿದ್ದೇ ನಾನು, ವ್ಯಾಪಾರಸ್ಥರು ದೂಳು ಸೇವನೆ ಮಾಡುತ್ತಾ ವ್ಯಾಪಾರ ಮಾಡುತ್ತಿದ್ದರು, ಇದಕ್ಕೆ ಅವರೇ ಉತ್ತರಿಸಬೇಕು ಎಂದು ಹೇಳಿದರು. ನಾಗರಬೆಟ್ಟದ ಏತ ನೀರಾವರಿ ಯೋಜನೆ ಸಂಪೂರ್ಣವಾಗಿ ನೆನೆಗುದಿಗೆ ಬಿದ್ದಿದ್ದು, ರೈತರು ನೀರಿನ ಕೊರತೆಯಿಂದ ಸಂಕಷ್ಟ ಅನುಭವಿಸುತ್ತಿದ್ದಾರೆ. ತಮ್ಮ ಅವಧಿಯಲ್ಲಿ ಕೆರೆಗಳನ್ನು ತುಂಬಿಸುವ ಕಾರ್ಯಕ್ಕೆ ಆದ್ಯತೆ ನೀಡಿದ್ದೆ.

ಈಗಿನ ಶಾಸಕರು ಡವಳಗಿ ಕೆರೆಯನ್ನು ತುಂಬಿಸಿ ಕಾರ್ಯನಿಷ್ಠೆ ತೋರಿಸಲಿ ಎಂದು ಸವಾಲು ಹಾಕಿದರು. ಮುಸ್ಲಿಂ ಸಮುದಾಯದವರು ಮತ ಹಾಕದಿದ್ದರೂ ತಾವು ಅವರಿಗೆ ಅನ್ಯಾಯ ಮಾಡಿಲ್ಲ ಎಂದು ಸ್ಪಷ್ಟಪಡಿಸಿದ ನಡಹಳ್ಳಿಯವರು, ಉರ್ದು ಶಾಲೆಗೆ 60 ಲಕ್ಷ ರೂ. ಅನುದಾನ ನೀಡಿದ್ದುದನ್ನು ಹಾಗೂ ಅಂಬೇಡ್ಕರ್ ಸರ್ಕಲ್ ಮತ್ತು ಬಸವೇಶ್ವರ ಸರ್ಕಲ್ ನಿರ್ಮಾಣಕ್ಕೆ ತಮ್ಮ ಅವಧಿಯಲ್ಲಿ ಶ್ರಮಿಸಿದ್ದುದನ್ನು ಸ್ಮರಿಸಿದರು. ಆದರೆ ಈಗಿನ ಕಾಂಗ್ರೆಸ್ ನಾಯಕರು ಕೇವಲ ಜಾತಿ-ಧರ್ಮದ ಹೆಸರಿನಲ್ಲಿ ಮತ ಪಡೆದು ಜನರನ್ನು ಕೈಬಿಟ್ಟಿದ್ದಾರೆ ಎಂದು ಆರೋಪಿಸಿದರು.

ಮುದ್ದೇಬಿಹಾಳದ ಕ್ರೀಡಾಂಗಣಕ್ಕೆ 2 ಕೋಟಿ 50 ಲಕ್ಷ ರೂ., ಶಾಲಾ ಕಟ್ಟಡಗಳಿಗೆ 1 ಕೋಟಿ 50 ಲಕ್ಷ ರೂ. ಸೇರಿದಂತೆ ಅನೇಕ ಅಭಿವೃದ್ಧಿ ಯೋಜನೆಗಳಿಗೆ ತಾವು ಅನುದಾನ ನೀಡಿದ್ದೇನೆ ಎಂದು ಹೇಳಿದರು. ಮುಸ್ಲಿಂ ಸಮುದಾಯದವರು ಮತ ಹಾಕಿದವರಿಗೆ ಕೊರಳುಪಟ್ಟಿ ಹಿಡಿದು ಅಭಿವೃದ್ಧಿಯನ್ನು ಕೇಳಲಿ ಎಂದು ಕಿಡಿಕಾರಿದರು. ಈ ಬಾರಿ ಮುದ್ದೇಬಿಹಾಳದ ಜನತೆ ಎಚ್ಚೆತ್ತುಕೊಳ್ಳಬೇಕು. ಅಭಿವೃದ್ಧಿ ಮಾಡದ ನಾಯಕರನ್ನು ಪ್ರಶ್ನಿಸುವ ಕಾಲ ಬಂದಿದೆ ಎಂದು ನೇರ ಸವಾಲು ಹಾಕಿದ ಅವರು, ತಮ್ಮ ಶಾಸಕತ್ವದ ಅವಧಿಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು ಸ್ಮರಿಸಿದರು. ಮುಂದಿನ ದಿನಗಳಲ್ಲಿ ತಾಲ್ಲೂಕಿನ ಪ್ರತಿಯೊಂದು ಓಣಿಗೂ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಆಲಿಸುವುದಾಗಿ ತಿಳಿಸಿದರು. ಈ ಸಂಧರ್ಭದಲ್ಲಿ ಸಂಜು ಬಾಗೇವಾಡಿ, ಸಂಗನಗೌಡ ಪಾಟೀಲ್, ಪರಸುರಾಮ ನಾಲತವಾಡ, ಪ್ರಭು ಕಡಿ,ಗೀರಿಶ ಪಾಟೀಲ್,ಮದನಸ್ವಾಮಿ ಹೀರೆಮಠ, ಅಶೋಕ ಚಿನಿವಾರ,ಬಸಯ್ಯಾ ನಂದಿಕೇಶ್ವರಮಠ, ಹುಲಗೇಪ್ಪ ಕಿಲ್ಲಾರಹಟ್ಟಿ,ನಾಗೇಶ ಕವಡಿಮಟ್ಟಿ, ಪುನಿತ್ ಹಿಪ್ಪರಗಿ,ನೀಖಿಲ್ ಮಲಗಲದಿನ್ನಿ, ಶಿವು ಬಿರಾದಾರ,ಅನೀಲ ರಾಠೋಡ,ಶಿವು ಲದ್ದಿಮಠ, ಕೇಖಾ ಕೊಂಡಗೂಳಿ,ಗೌರಮ್ಮ ಹುನಗುಂದ,ಪಾರ್ವತಿ ಕುಂಬಾರ, ಪ್ರೀತಿ ಕುಂಬಾರ ಸೇರಿದಂತೆ ಇನ್ನಿತರರು ಪತ್ರಿಕಾಘೋಷ್ಠಿಯಲ್ಲಿ ಇದ್ದರು.